The question is :

" That clause 3 do stand part of the Bill.

The motion was adopted

Clause 3 was added to the Bill.

CLAUSE 1 Etc.

MADAM SPEAKER.— The question is :

" That Clause the Long Title the Preamble and the Enacting formula do stand part of the Bill "

The motion was adopted

Clause 1, the Long Title the Preamble and the Enacting Formula were added to the Bill.

Motion to pass

SRI M. Y. GHORPADE.— I move,

"That the Karnataka (Enhancement of Certain Casses) Bill, 1976 be passed."

MADAM SPEAKER.— The question is·

" That the Karnataka (Enhancement of Certain Cases) Bill, 1976 be passed."

The motion was adopted and the bill was passed

Karnataka Enteratinment Tax Amendment Bill 1976.

Motion to Consider

SRI M. Y. GHORPADE.— I move that the Karnataka Entertainments Tax (Amendment) Bill, 1976 be taken into consideration.

MADAM SPEAKRE,— Motion moved.

" That the Karnataka Entertainments Tax (Amendment) Bill, 1976 be taken into consideration."

† ಶ್ರೀ ಎಂ. ವೈ. ಘೋರ್ಪಡೆ.— ಈಗಾಗಲೇ ಎಂಟರ್‌ಟೇನ್‌ಮೆಂಟ್ ಟ್ಯಾಕ್ಸ್ ಮೇಲೆ ಸರ್‌ಚಾರ್ಜ್ ಹಾಕಿರುವುದು ನಮ್ಮ ರಾಜ್ಯದಲ್ಲಿ ಜಾರಿಯಲ್ಲಿದೆ. ಈಗ ಅದರ ಜೊತೆಗೆ ಅಡಿಷನಲ್ ಟ್ಯಾಕ್ಸ್ ಸೇರಿಸಿ ನಮ್ಮ ಆದಾಯವನ್ನು ಸ್ವಲ್ಪ ಮಟ್ಟಿಗೆ ಜಾಸ್ತಿ ಮಾಡಿಕೊಳ್ಳಬೇಕೆಂಬುದೇ ನಮ್ಮ ಉದ್ದೇಶ ನಾನು ಹಿಂದೆ ಇದರ ಬಗ್ಗೆ ಬಜೆಟ್ಟಿನಲ್ಲಿ ಸ್ಪಷ್ಟವಾಗಿ ಹೇಳಿದ್ದೇನೆ. ಇದರಿಂದ ಅಡಿಷನಲ್ ಟ್ಯಾಕ್ಸ್ ಬಗ್ಗೆ ೧ ಕೋಟಿ ೩೦ ಲಕ್ಷ ರೂಪಾಯಿಗಳು ಸರ್ಕಾರಕ್ಕೆ ಹೆಚ್ಚಿಗೆ ಬರುತ್ತದೆ. ಈ ವರ್ಷ ಅದರಿಂದ ೯ ಕೋಟಿ ೫೦ ಲಕ್ಷ ರೂಪಾಯಿಗಳು ಬರುತ್ತಿದೆ. ಅದರ ಜೊತೆಗೆ ಇದನ್ನು ಸೇರಿಸಿದರೆ ವರ್ಷಕ್ಕೆ ೧೧ ಕೋಟಿ ರೂಪಾಯಿಗಳಷ್ಟು ಒಟ್ಟು ಆದಾಯ ಎಂಟರ್‌ಟೇನ್‌ಮೆಂಟ್ ಟ್ಯಾಕ್ಸ್ ಮತ್ತು ಅಡಿಷನಲ್ ಟ್ಯಾಕ್ಸ್‌ನಿಂದ ಬರುವುದಕ್ಕೆ ಸಾಧ್ಯ. ಹೋದವರ್ಷ ೭೫–೭೬ರಲ್ಲಿ ೮ ಕೋಟಿ ೫೦ ಲಕ್ಷಕ್ಕೆ ಈ ಬಾಬಿನಲ್ಲಿ ೭ ಕೋಟಿ ೬೦ ಲಕ್ಷ ಬಂದಿದೆ.

ಈ ವರ್ಷ ಅಡಿಷನಲ್ ಟ್ಯಾಕ್ಸ್ ಸೇರಿದರೆ ೧೧ ಕೋಟಿ ರೂಪಾಯಿಗಳು ಆಗುತ್ತದೆ. ಈ ರೀತಿಯಾಗಿ ಅಡಿಷನಲ್ ಟ್ಯಾಕ್ಸ್ ಹಾಕುವಾಗ ಪ್ರೋಗ್ರೇಷನ್ ಗಮನದಲ್ಲಿಟ್ಟುಕೊಂಡಿದ್ದೇವೆ. ಅಂದರೆ ಟಿಕೆಟ್ ಬೆಲೆ ಜಾಸ್ತಿ ಇದ್ದರೆ ಅದರ ಮೇಲೆ ಟ್ಯಾಕ್ಸ್ ಪ್ರಮಾಣ ಜಾಸ್ತಿಯಾಗುತ್ತದೆ. ಟಿಕೆಟ್ ಬೆಲೆ ಕಡಿಮೆ ಇದ್ದರೆ ಆದರ ಮೇಲೆ ಈ ಟ್ಯಾಕ್ಸ್ ಪ್ರಮಾಣ ಕಡಿಮೆಯಾಗುತ್ತದೆ. ಒಟ್ಟಿನಲ್ಲಿ ಎಂಟರ್‌ಟೇನ್‌ಮೆಂಟ್ ಟ್ಯಾಕ್ಸ್ ಕಲೆಕ್ಷನ್ ವ್ಯವಸ್ಥೆ ಇನ್ನಷ್ಟು ಪ್ರಗತಿಪರವಾಗಿ ಮಾಡುವ ಪ್ರಯತ್ನ ಮಾಡಿದ್ದೇವೆ. ನಾನು ಮೊದಲೆ ಹೇಳಿದ ಹಾಗೆ ಬಡ್ಜೆಟ್ ಚರ್ಚೆಗೆ ಉತ್ತರ ಕೊಡುವಾಗ ಒಂದು ರೂಪಾಯಿ ಮತ್ತು ಆದರ ಕೆಳಗೆ ಟಿಕೆಟ್ ಇರುವಂಥಾದ್ದಕ್ಕೆ ಏನು ಅಡಿಷನಲ್ ಟ್ಯಾಕ್ಸ್ ಹಾಕಬೇಕೆಂದು ಯೋಚನೆಮಾಡಿತ್ತೋ ಅದನ್ನು ಈಗ ಕೈಬಿಡುತ್ತಿದ್ದೇವೆ. ಏಕೆಂದರೆ ಹಳ್ಳಿಗಳಲ್ಲಿ ಅದರಲ್ಲಿಯೂ ಮೊಫ್ಯಸಲ್ ಥಿಯೇಟರ್‌ಗಳಲ್ಲಿ ಕಡಿಮೆ ಬೆಲೆ ಟಿಕೆಟ್ ತೆಗೆದುಕೊಂಡು ಹೋಗುವವರು ಜಾಸ್ತಿ ಇರುತ್ತಾರೆ. ಸುಮಾರು ೬೦ ಥಿಯೇಟರುಗಳಿಂದ ಯಾವ್ಯಾವ ಮಟ್ಟದಲ್ಲಿ ಎಷ್ಟೆಷ್ಟು ಆದಾಯ ಬರುತ್ತದೆಂದು ನೋಡಿದರೆ ಹಳ್ಳಿಗಳಲ್ಲಿಯೇ ಜಾಸ್ತಿ ವರಮಾನ ಬರುತ್ತಿದೆ ಪಟ್ಟಣಗಳಲ್ಲಿ ಇದರ ಬಗ್ಗೆ ಆದಾಯ ಪ್ರಮಾಣ ಬಹಳ ಕಡಿಮೆ.

SRI M. S. KRISHAN.—What is the total income from the Urban areas ?

SRI M. Y. GHORPADE.—I do not have the ready figures. I have go figaures about touring talkies. But one thing is very clear, that is, the proportion of higher class tickets is very much higher in the urban areas than in rural areas. This reflects in a way the poverty in the rural areas. The statistics are very interesting to know. But I do not want to go in detail as there is no time. Keeping this in mind Rupee one and below we have exempted.

ಆಮೇಲೆ ಕಂಪ್ಯಾರೆಟಿವ್ ಅಡ್ಮಿಷನ್‌ರೇಟ್ಸ್‌ಬಗ್ಗೆ ಗಮನಕೊಡಬೇಕೆಂದು ಕೆಲವರು ಹೇಳಿದ್ದಾರೆ. ಅದನ್ನ ಸಹ ನಾನು ನೋಡಿದ್ದೇನೆ. ತಮಿಳುನಾಡಿನಲ್ಲಿ ಮತ್ತು ಕೇರಳದಲ್ಲಿ ಮತ್ತು ಆಂಧ್ರದಲ್ಲಿ ಎಷ್ಟಿದೆ ಮತ್ತು ಅಲ್ಲಿನ ಗ್ರಾಸ್ ವ್ಯಾಲ್ಯು ಮತ್ತು ಟ್ಯಾಕ್ಸೇಷನ್ ಎಲ್ಲವನ್ನೂ ಹೋಲಿಸಿದರೆ ತಮಿಳುನಾಡಿಗಿಂತ ನಾವು ಬಹಳ ಕಡಿಮೆ ಇದ್ದೇವೆ ಆಂಧ್ರಕ್ಕಿಂತ ಕಡಿಮೆ ದರ್ಜೆಯ ಟಿಕೆಟ್ ನಮ್ಮಲ್ಲಿದೆ. ನಾವು ಎಷ್ಟೇ ಜಾಸ್ತಿ ಮಾಡಿದರೂ ಸದರನ್ ಸ್ಟೇಟ್ಸ್‌ಗೆ ಹೋಲಿಸಿ ನೋಡಿದರೆ ನಾವು ಬಹಳವಾಗಿ ಹೆಚ್ಚಿಗೆ ಟ್ಯಾಕ್ಸ್ ಹಾಕುವ ಪ್ರಯತ್ನ ಮಾಡಲಿಲ್ಲವೆಂದು ನಾನು ಸ್ಪಷ್ಟವಾಗಿ ಹೇಳಬಯಸುತ್ತೇನೆ. The rates of admission in Andhara Pradesh and Tamilnadu compares favourobly.

ಆ ಮೇಲೆ ಈ ಬಿಲ್‌ನಲ್ಲಿ ಬೇರೆ ಬೇರೆ ವಿಷಯ ಕೂಡ ಸೇರಿಸಿದ್ದೇವೆ. ಇದೇ ರೀತಿ ಕ್ಲಾಜ್ ೫ರ ಪ್ರಕಾರ ವಿಲ್ ಫುಲ್ ಸಪರೇಷನ್ ಮಾಡಿದರೆ ಅಂಥವರಿಗೆ ಪೆನಾಲ್ಟಿ $1\frac{1}{2}$ ಟೈಂಸ್ ಎಂದು ಇದೆ ಅದಕ್ಕೆ ನಾವು 2 ಟೈಮ್ ಎಂದು ಮಾಡಿದ್ದೇವೆ. ಮಾನ್ಯ ಶ್ರೀ ಶಾಮಣ್ಣನವರು ಅದು ಸಾಲದು 3 ಟೈಮ್ ಇರಲಿ ಎಂದು ಅವರು ಒಂದು ತಿದ್ದುಪಡಿಯನ್ನು ಕಳುಹಿಸಿದ್ದಾರೆ. ಆ ತಿದ್ದುಪಡಿಯ ಬಗ್ಗೆ ನನಗೂ ಸಹಾನುಭೂತಿ ಇದೆ. ತಾವು ಎಲ್ಲಾ ಅದಕ್ಕೆ ಒಪ್ಪುವುದಾದರೆ ನನ್ನದೇನೂ ಆಕ್ಷೇಪಣೆ ಇಲ್ಲ. ಇನ್ನು ಕ್ಲಾಜ್ (9)ರಲ್ಲಿ ಸ್ಮಾಲ್ ಪೆನಾಲ್ಟಿಯಾದರೆ ಆ ಪೆನಾಲ್ಟಿಯನ್ನು ರಿಕವರಿ ಮಾಡುವ ಪದ್ಧತಿ, ವಿಧಾನದ ಬಗ್ಗೆ ಇದರಲ್ಲಿ ಅವಕಾಶವಿದೆ ಅದು $1\frac{1}{2}$ ಪರ್ಸೆಂಟ್ ಪರ್ 3 ಮಂತ್ಸ್ ಎಂದು ಇದೆ ಅದನ್ನು $2\frac{1}{2}$ ಎಂದು ಮಾರ್ಪಾಡು ಮಾಡಿದ್ದೇವೆ. ಇನ್ನು ಕ್ಲಾಜ್ (11)ರಲ್ಲಿ, ಅಫೆನ್ಸಸ್‌ನ್ನು ಕೋರ್ಟಿಗೆ ತೆಗೆದುಕೊಂಡು ಹೋಗಿದ್ದರೆ. ಆ ರೀತಿ ಅಫೆನ್ಸಸ್ ಇದ್ದರೆ ಅದಕ್ಕೆ ಪೆನಾಲ್ಟಿ ಎಷ್ಟಿರಬೇಕೆಂದು ಹೇಳಿ ಇದೆ. ಅದರಲ್ಲಿ 500 ರೂಪಾಯಿಗಳಿಂದ 1 ಸಾವಿರದವರೆಗೆ ಇದ್ದುದನ್ನು 1 ಸಾವಿರದಿಂದ 2 ಸಾವಿರ ಮಾಡಿದ್ದೇವೆ. ಮತ್ತೆ ಇದರ ಜೊತೆಗೆ ಇಂಪ್ರಿಜನ್‌ಮೆಂಟ್ ಮಾಡಲಿಕ್ಕೆ ಅಧಿಕಾರವಿಲ್ಲ ಅದಕ್ಕೂಕೂಡ ಅವಕಾಶ ಮಾಡಿಕೊಟ್ಟಿದ್ದೇವೆ. ಏತಕ್ಕೆಂದರೆ ಕನ್‌ವಿಕ್ಷನ್ ಆದರೆ, ಬರೀ ಫೈನ್ ಹಾಕಿದರೆ ಸಾಲದು ಇಂಪ್ರಿಜನ್‌ಮೆಂಟ್ ಮಾಡುವುದಕ್ಕೆ ಸಾಧ್ಯವಿರುತ್ತದೆಂದು ಆ ರೀತಿ ಮಾರ್ಪಾಡು ಮಾಡಿದ್ದೇವೆ. ಇನ್ನು ಕಾಂಪೌಂಡಿಂಗ್ ಮಾಡುವ ವ್ಯವಸ್ಥೆ ಇದೆ ಆದರೆ ಕ್ಲಾಜ್ (13) ನೋಡಿದರೆ ಲೈಸನ್ಸ್ ಕೊಡುವಾಗ ರಿವೋಕ್ ಮಾಡುವುದಕ್ಕೆ ಅಧಿಕಾರ ಕೊಟ್ಟಿದ್ದಾರೆ. ಕೋರ್ಟ್‌ನಲ್ಲಿ ಕನ್‌ವಿಕ್ಟ್ ಆದರೆ ಅಥವಾ ಕಾಂಪೌಂಡ್ ಆದರೆ ಅದರ ಜೊತೆಗೆ ಲೈಸನ್ಸ್

ರಿವೋಕ್ ಮಾಡುವುದಕ್ಕೆ ಅಧಿಕಾರ ಇರತಕ್ಕಂಥದ್ದು ಮುಖ್ಯವೆಂದು ಮಾಡಿದ್ದೇವೆ. ಆ ಮೇಲೆ ಕ್ಲಾಜ್ (8) ರಲ್ಲಿ, Rounding off of tax etc., ಇದರ ಬಗ್ಗೆ ಫಿಲಂ ಚೇಂಬರ್ ನವರೂ ಸಲಹೆ ಮಾಡಿದರು. ಟ್ಯಾಕ್ಸ್ ಹಾಕುವಾಗ Rounding off ಮಾಡಿ ಎಂದು ಹೇಳಿ ಕ್ಲಾಜ್ 5,8 ಗಳನ್ನು ಒಪ್ಪಿಕೊಂಡಿದ್ದಾರೆ. ಮತ್ತೆ ಕ್ಲಾಜ್ (10)ರಲ್ಲಿ ಅಕೌಂಟ್ಸ್ ಬುಕ್‌ನ್ನು ಸೀಜ್ ಮಾಡುವ ಅಧಿಕಾರವನ್ನು ತೆಗೆದುಕೊಂಡಿದ್ದೇವೆ. ಇಲ್ಲಿಯವರೆಗೆ ಇನ್ಸ್‌ಪೆಕ್ಷನ್ ಮಾಡುವ ಅಧಿಕಾರವಿತ್ತು. ಈಗ ಸೀಜ್ ಮಾಡುವ ಅಧಿಕಾರವನ್ನೂ ಕೂಡ ತೆಗೆದುಕೊಂಡಿದ್ದೇವೆ. ಕ್ಲಾಜ್ (7 ರಲ್ಲಿ ಟ್ಯಾಕ್ಸ್ ರಿಫಂಡ್ ಮಾಡುವ ಬಗ್ಗೆ ಎಂದರೆ ಎಲೆಕ್ಟ್ರಿಸಿಟಿ ಫೇಲ್ ಆದಾಗ ಸಿನಿಮಾ ನೋಡಲು ಹೋಗುವವರಿಗೆ ಅನುಕೂಲವಾಗುವ ದೃಷ್ಟಿಯಿಂದ ಅವರಿಗೆ ಹಣವನ್ನು ರಿಫಂಡ್ ಮಾಡಲು ಅನುಕೂಲವಾಗುವಂತೆ ಯಾವ ಪ್ರಮಾಣದಲ್ಲಿ ಟ್ಯಾಕ್ಸ್‌ನ್ನು ಕೊಟ್ಟಿರುತ್ತಾರೆ ಅದೇ ಪ್ರಮಾಣದಲ್ಲಿ ಕೊಡಬೇಕೆಂದು ಮಾಡಿದ್ದೇವೆ. ಕ್ಲಾಜ್ (6)ರಲ್ಲಿ ಕೂಡ ಟ್ಯಾಕ್ಸ್ ಎಕ್ಸೆಂಪ್ಷನ್‌ಗೆ ಅನ್ವಯಿಸುತ್ತದೆ. ಈ ಟ್ಯಾಕ್ಸ್ ಎಕ್ಸೆಂಪ್ಷನ್ ದುರುಪಯೋಗವಾದಂತೆ ನೋಡಿಕೊಳ್ಳಲು ಅನುಕೂಲವಾಗುವಂತೆ ಕೆಲವು ನಿರ್ಬಂಧನೆಗಳನ್ನೂ ಕೂಡ ಹಾಕಿ ಅದರ ಮೇಲೆ ಅಧಿಕಾರವನ್ನು ತೆಗೆದುಕೊಂಡಿದ್ದೇವೆ. ಇನ್ನು ಕ್ಲಾಜ್ (4)ರಲ್ಲಿ ವೀಕಲಿ ರಿಟರ್ನ್‌ನಿಂದ ಬರತಕ್ಕಂಥ ಹಣವನ್ನು ಟ್ರೆಜರಿಗೆ ಕಟ್ಟಬೇಕೆಂದು ಸಧ್ಯಕ್ಕೆ ಇದೆ ಆದರೆ ಅದು ರೂಲ್ಸ್ ಮಟ್ಟದಲ್ಲಿ ಇಲ್ಲ ಅದಕ್ಕೆ ಪೂರಕವಾಗಿ ಅಧಿಕಾರ ಇರಬೇಕು ಇಲ್ಲದೇ ಹೋದರೆ ಕೋರ್ಟ್‌ನಲ್ಲಿ ಪ್ರಶ್ನೆ ಮಾಡಲಿಕ್ಕೆ ಅವಕಾಶ ವಾಗುತ್ತದೆಂದು ಹೇಳಿ ವ್ಯವಸ್ಥೆ ಮಾಡಿದ್ದೇವೆ. ಇಷ್ಟು ಮಾತ್ರ ಈ ಬಿಲ್ಲಿನಲ್ಲಿರತಕ್ಕಂಥ ಮುಖ್ಯ ಅಂಶಗಳು. ಆದುದರಿಂದ ಈ ಬಿಲ್ಲಿಗೆ ಒಪ್ಪಿಗೆಯನ್ನು ಕೊಡಲು ಅಷ್ಟೊಂದು ಚರ್ಚೆಯ ಅವಶ್ಯಕತೆ ಇಲ್ಲವೆಂದು ನನ್ನ ಭಾವನೆ.

†ಶ್ರೀ ಟಿ. ಎಂ. ಮಂಜುನಾಥ್ (ತಿಪಟೂರು).—ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಅರ್ಥಸಚಿವರು ಮಂಡಿಸಿರತಕ್ಕಂಥ ಮಸೂದೆಯನ್ನು ವಿರೋಧ ಮಾಡುತ್ತಾ, ಅವರು ಕೇವಲ ಸರ್ಕಾರದ ಬೊಕ್ಕಸಕ್ಕೆ ಜನಗಳಿಂದ ಹಿಂಸೆ ಮಾಡಿ ತೆರಿಗೆ ಹಾಕಿ ತೆಗೆದುಕೊಳ್ಳಬೇಕೋ ಅಷ್ಟನ್ನು ಮಾತ್ರ ಮಾಡಿದ್ದಾರೆಯೇ ವಿನಹ: ಈ ಚಲನ ಚಿತ್ರ ಕೈಗಾರಿಕೆ ಎಷ್ಟರಮಟ್ಟಿಗೆ ಬೆಳೆಯಬೇಕಾಗಿತ್ತೋ ಅಷ್ಟರಮಟ್ಟಿಗೆ ಬೆಳೆಯುವುದಕ್ಕೆ ನೆರವನ್ನು ಕೊಡುವುದನ್ನು ಬಿಟ್ಟು ಬಿಟ್ಟಿದ್ದಾರೆ. ಅವರು ಬಂದಾಗಿನಿಂದ ಒಂದೇ ಸಮನೆ ತೆರಿಗೆ ಹಾಕಿದ್ದೇ ಹಾಕುತ್ತಿದ್ದಾರೆ, ಜನ ಕೊಟ್ಟಿದ್ದೇ ಕೊಟ್ಟಿದ್ದೇ. ತೆರಿಗೆಯನ್ನು ಏರಿಸಿದ್ದೇ ಏರಿಸಿದ್ದು. ಅಧ್ಯಕ್ಷರೇ, ಮಾನ್ಯ ಸಚಿವರು ಹೇಳಿದರು ಸುಮಾರು 60 ಚಲನ ಚಿತ್ರ ಮಂದಿರಗಳ ಬಗ್ಗೆ ಸರ್ವೆ ಮಾಡಿದ್ದೇವೆ ಅದರಲ್ಲಿ 1 ರೂಪಾಯಿಗಿಂತ ಕಡಿಮೆ ಇರತಕ್ಕಂಥ ವರ್ಗಕ್ಕೆ ನಾವು ತೆರಿಗೆಯನ್ನು ಜಾಸ್ತಿ ಮಾಡುವುದಿಲ್ಲ ಎನ್ನತಕ್ಕಂಥ ಅಂಶವನ್ನು ವ್ಯಕ್ತ ಮಾಡಿದರು. ಸ್ವಾಮಿ ಬೆಂಗಳೂರು ನಗರಕ್ಕೆ ಬಡವರೂ ಬರುತ್ತಾರೆ ಶ್ರೀಮಂತರೂ ಬರುತ್ತಾರೆ. ನಾವು ನೋಡಿದ್ದೇವೆ. ತಾವು ನೋಡಿದ್ದೀರಿ, ಈಗ ಒಂದು ಹೊಸ ಚಿತ್ರ ಬಂದಾಗ, ಯಾರೋ ಪ್ರಯಾಣಿಕರು ಬೆಂಗಳೂರಿಗೆ ಬಂದಿರುತ್ತಾರೆ ಅವರಿಗೆ ರಾತ್ರಿ ಮಲಗಿಕೊಳ್ಳುವುದಕ್ಕೆ ಸ್ಥಳವಿರುವುದಿಲ್ಲ ಅಂಥವರು ಎರಡು ಗಂಟೆಯವರೆಗೆ ಕಾಲ ತಳ್ಳಿ ಆನಂತರ ತಮ್ಮ ಊರಿಗೆ ಹೊರಟು ಹೋದರಾಯಿತೆಂದು ಸಿನಿಮಾಕ್ಕೆ ಹೋಗುತ್ತಾರೆ. ಆದರೆ ಅವರಿಗೆ ಅಲ್ಲಿ 1 ರೂಪಾಯಿಯ ಟಿಕೆಟ್ ಸಿಕ್ಕುವುದಲ್ಲ. ಅವರೂ ಕೂಡ 2-3 ರೂಪಾಯಿಗಳನ್ನು ಕೊಟ್ಟು ನೋಡಬೇಕಾಗುತ್ತದೆ. ಇದನ್ನು ಸನ್ಮಾನ್ಯ ಅರ್ಥಸಚಿವರೂ ಒಪ್ಪಿಕೊಳ್ಳುತ್ತಾರೆ. ಆದುದರಿಂದ ಬಡವನೂ ತೆರಿಗೆಯನ್ನು ಕೊಟ್ಟಂತಾಯಿತು. ಇದರಿಂದ ಶ್ರೀಮಂತರಿಗೂ ಮತ್ತು ಬಡವರಿಗೂ ಮನೋರಂಜನೆಯ ತೆರಿಗೆ ಒಂದೇ ಆಯಿತು. ಚಲನ ಚಿತ್ರ ಪ್ರೇಮಿಗಳಿಗೆ ಹಾಗೂ ಚಲನ ಚಿತ್ರಕ್ಕೆ ಪ್ರೋತ್ಸಾಹ ಕೊಡತಕ್ಕಂಥ ವರ್ಗಕ್ಕೆ ಹೆಚ್ಚಿನ ತೆರಿಗೆಯನ್ನು ಹಾಕತಕ್ಕಂಥದ್ದು ಒಳ್ಳೆಯದಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ಟೂರಿಂಗ್ ಟಾಕೀಸ್ ನವರ ಹಿಂಸೆ ಎಷ್ಟು ಎಂಬುದನ್ನು ತಾವು ನೋಡಬೇಕು, ಅವರಿಗೆ ಎನ್. ಒ. ಸಿ. ಕೊಡಬೇಕಾದರೆ, ಲೈಸನ್ಸ್ ಕೊಡಬೇಕಾದರೆ ಅವರಿಗೆ ಕೊಡತಕ್ಕಂಥ ಹಿಂಸೆ ಅಷ್ಟಿಷ್ಟಲ್ಲ. ಇಷ್ಟೆಲ್ಲಾ ಕಷ್ಟಗಳನ್ನು ಅವರು ದಾಟಿ ಬಂದರೆ, ರಾತ್ರಿ ಏನಾದರೂ ಮಳೆ ಬಂದರೆ ಅವತ್ತು ಶೋನೇ ಇಲ್ಲ. ಇವತ್ತು ನಿಮಗೆ ನಿಜ ವಿಷಯ ಹೇಳುವುದಾದರೆ ಪ್ರೊಜೆಕ್ಟರಗಳನ್ನು ಒಬ್ಬ ಗಿರವಿ ಅಂಗಡಿಯಲ್ಲಿ ಇಟ್ಟಿದ್ದಾರೆ, ಟೆಂಟ್‌ನ್ನು ಇನ್ನೊಬ್ಬ ಗಿರವಿ ಅಂಗಡಿಯಲ್ಲಿಟ್ಟಿರುತ್ತಾರೆ. ಅವರಿಗೆ ಎಷ್ಟೇ ಕಷ್ಟವಿರಲಿ ಅವರು ಟ್ಯಾಕ್ಸ್‌ನ್ನು ಮಾತ್ರ ಕಟ್ಟಬೇಕು. ಇವತ್ತು ಅವರಿಗೆ ಹೆಚ್ಚಿನ ಸೌಲಭ್ಯ ಮಾಡಿಕೊಡಿ, ರಕ್ಷಣೆ ಕೊಡಿ. ನೀವು ಬರೀ ತೆರಿಗೆಯನ್ನು ಏರಿಸಿ ಬಿಟ್ಟರೆ ಸಾಲದು. ಇವತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಚಲನಚಿತ್ರವನ್ನು ಬಡವರೇ ಹೆಚ್ಚು ನೋಡತಕ್ಕಂಥವರು. ಇವತ್ತು ನೀವು ಸಣ್ಣ ಪಟ್ಟಣಗಳಲ್ಲಿ ನೋಡುವುದಾದರೆ, ನೀವು ಟ್ಯಾಕ್ಸನ್ನು ಹೆಚ್ಚಿಸಿರುವುದರಿಂದ ಸಿನಿಮಾ ಮಾಲೀಕರನ್ನು ಟೈಯುತ್ತಿದ್ದಾರೆ. ಈ ಸಿನಿಮಾ ಮಂದಿರದ ಮಾಲೀಕರು ಟಾಕ್ಸ್‌ನು

ಜಾಸ್ತಿ ಮಾಡಿ ಬಿಟ್ಟಿದ್ದಾರೆಂದು ಹೇಳುತ್ತಾರೆ ಸರ್ಕಾರದವರು ತೆರಿಗೆ ಹಾಕಿರತಕ್ಕಂಥದು ಅವರಿಗೆ ಗೊತ್ತಾಗುವುದಿಲ್ಲ. ಇವತ್ತು ತೆರಿಗೆಯನ್ನು ಹಾಕುವುದಕ್ಕೆ ಅನೇಕ ಬಾಬುಗಳಿವೆ. ಆದರೆ ಬಡವರು ನೋಡತಕ್ಕಂಥ ಚಿತ್ರದ ಮೇಲೂ ಕೂಡ ತೆರಿಗೆಯನ್ನು ಹಾಕುತ್ತಿದ್ದೀರಿ, ಇವತ್ತು ಚಲನಚಿತ್ರ ಕೈಗಾರಿಕೆಯನ್ನು ಸರ್ಕಾರದವರು ಶೋಷಣೆ ಮಾಡುತ್ತಿದ್ದಾರೆ. ಇದು ದಯವಿಟ್ಟು ಹೋಗಬೇಕು. 3 ಕಾಸು 6 ಕಾಸು ಹಾಕಿ ಬಿಟ್ಟರೆ ಯಾರು ಕೇಳುವುದಿಲ್ಲವೆಂದು ತಾವೇನೋ ಹಾಕಿಬಿಟ್ಟರಿ, ಇವತ್ತು ಅವರೇನೋ ಬೇಜಾರು ಕಳೆಯುವುದಕೋಸ್ಕರ ಹೋದರೆ ಅದಕ್ಕೂ ಕೂಡ ಅವರು ಟ್ಯಾಕ್ಸನ್ನು ಕೊಡಬೇಕೆಂದು ಹೇಳಿದರೆ ಅದು ನ್ಯಾಯವೇ ? ಇವತ್ತು ಅನೇಕ ಕಾನೂನಿಗೆ ತಿದ್ದುಪಡಿಗಳನ್ನು ತಂದಿದ್ದೀರಿ ಟ್ಯಾಕ್ಸ್ ಕೊಡತಕ್ಕಂಥವರು ಕೊಡದಿದ್ದರೆ ಅವರಿಗೆ ಶಿಕ್ಷೆ ಕೊಡಲು ತಿದ್ದುಪಡಿ ತಂದಿದ್ದೀರಿ ಅದು ಎಲ್ಲಾ ಸರಿಯೇ ಆದರೆ ತಾವು ಟ್ಯಾಕ್ಸ್ ಹಾಕಿರತಕ್ಕಂಥ ಕ್ರಮವನ್ನು ಸರಿಯಾಗಿದೆಯೆಂದು ಹೇಳುವುದಕ್ಕೆ ಆಗುವುದಿಲ್ಲ. ಇವತ್ತು ಟ್ಯಾಕ್ಸನ್ನು ಸರಿಯಾಗಿ ವಸೂಲಿ ಮಾಡಿದರೆ 11 ಕೋಟಿ ಏನು ಬರುತ್ತಿದೆ ಅದು 13 ಕೋಟಿ ಬರುತ್ತದೆ. ಇವತ್ತು ಅನೇಕ ಚಿತ್ರಮಂದಿರಗಳಲ್ಲಿ ಅಧಿಕಾರಿಗಳೂ ಶಾಮೀಲು ಆಗಿದ್ದಾರೆ. ಅದನ್ನು ತಪ್ಪಿಸಲು ತಾವು ಸೂಕ್ತ ಕ್ರಮವನ್ನು ತೆಗೆದುಕೊಳ್ಳಿ. ಇವತ್ತು ತಾವು ದೊಡ್ಡ ಮನಸು ಮಾಡಿ ಹಾಕಿರತಕ್ಕಂಥ ತೆರಿಗೆಯನ್ನು ಕಡಿಮೆ ಮಾಡಿ. ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ಜನಗಳಿಗೆ ಸಾಲ ಸಿಗುತ್ತಿಲ್ಲ, ಅವರ ಕೈಯಲ್ಲಿ ಹಣವಿಲ್ಲ ಅವರು ಮನೋರಂಜನೆಯನ್ನೂ ಕೂಡ ಇವತ್ತು ನೋಡುವ ಹಾಗೆ ಇಲ್ಲ. ಇದರಿಂದ ಇವತ್ತು ಚಲನ ಚಿತ್ರ ಕೈಗಾರಿಕೆಯ ಮೇಲೆ ಪೆಟ್ಟು ಬೀಳುತ್ತಿದೆ. ಇದರಿಂದ ತಾವು ಹಾಕಿರತಕ್ಕಂಥ ತೆರಿಗೆಯನ್ನು ಜನತೆ ಕೊಡಲು ಸಾಧ್ಯವೇ ಎನ್ನುವ ಬಗ್ಗೆ ಯೋಚನೆ ಮಾಡಬೇಕಾಗಿದೆ.

ಆದ್ದರಿಂದ ನಾನು ಇದರ ಬಗ್ಗೆ ಹೆಚ್ಚು ಮಾತನಾಡಬೇಕಾಗಿಲ್ಲ. ತಾವು ಇದು ಬಹಳ ಸುಲಭ ಎಂದು ಹೇಳಿದಿರಿ, ಆದರೆ ಅಷ್ಟು ಸುಲಭವಾಗುವುದಿಲ್ಲ, ಈಗ ಹಾಕಿರತಕ್ಕ ಟ್ಯಾಕ್ಸ್ ಬಗ್ಗೆ ಮತ್ತೊಮ್ಮೆ ಪರಿಶೀಲನೆ ಮಾಡಬೇಕು, ಹಾಗೆ ಹೆಚ್ಚು ಮಾಡಿರತಕ್ಕ ಟ್ಯಾಕ್ಸನ್ನು ವಜಾ ಮಾಡಬೇಕು ಎಂದು ಹೇಳುತ್ತೇನೆ. ಇನ್ನು ಥಿಯೇಟರ್‌ನಲ್ಲಿ ಏನಾಗುತ್ತದೆ ಎಂದರೆ ಟಿಕೆಟ್ ಪ್ರಿಂಟ್‌ಮಾಡಿ ಇಟ್ಟಿರುತ್ತಾರೆ ಅದನ್ನು 15–20 ದಿವಸಗಳಿಗೆ ಒಂದು ಸಾರಿ ಅಸಿಸ್ಟೆಂಟ್ ಸೇಲ್ಸ್‌ಟ್ಯಾಕ್ಸ್ ಆಫೀಸರ್ ಹತ್ತಿರ ಹೋಗಿ ಮುದ್ರೆ ಒತ್ತಿಸಿಕೊಳ್ಳುವುದು ಇರುತ್ತದೆ. ಈಗ ಚಲನಚಿತ್ರ ಮಂದಿರದ ಓನರ್ ಯಾರು ಇದ್ದಾರೆ ಅವರಿಗೂ ತೊಂದರೆಯಾಗಬಾರದು, ಸರ್ಕಾರಕ್ಕೆ ಬರತಕ್ಕ ತೆರಿಗೆಯು ತಪ್ಪಬಾರದು ಆ ರೀತಿ ಮಾಡಬೇಕು, ಅಲ್ಲದೇ ಈಗ ಹಾಕಿರತಕ್ಕ ಟ್ಯಾಕ್ಸನ್ನು ವಾಪಸ್ಸು ತೆಗೆದುಕೊಳ್ಳಬೇಕು ಎಂದು ಹೇಳಿ ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಟಿ.ಆರ್. ಶಾಮಣ್ಣ.—(ಕೋಟೆ) ಮಾನ್ಯಅಧ್ಯಕ್ಷರೆ, ಈಗ ಮಾತನಾಡಿದ ನನ್ನ ಮಿತ್ರರಾದ ಮಂಜುನಾಥ್ ಅವರು ಈ ತೆರಿಗೆಯನ್ನು ಹಾಕಬಾರದು ಎಂದು ಹೇಳಿದರು. ಆದರೆ ನಾನು ಎಲ್ಲಾ ತೆರಿಗೆಗಳನ್ನು ವಿರೋಧ ಮಾಡುತ್ತಾ ಇದ್ದವನು ಇದರ ಬಗ್ಗೆ ಹೇಳುವುದಿಲ್ಲ, ಏಕೆಂದರೆ ಈ ಎಂಟರಟೈನ್‌ಮೆಂಟ್ ಟ್ಯಾಕ್ಸ್ ಕೊಡತಕ್ಕವರು ಯಾರು ಎಂದು ನೋಡುವುದಾದರೆ ಈ ಮನೋರಂಜನೆಯಿಂದ ಸಂತೋಷಪಡತಕ್ಕವರು, ಇಂತಹ ಸಂದರ್ಭದಲ್ಲಿ ಖರ್ಚು ಮಾಡುವಾಗ ಇನಷ್ಟು ಹೆಚ್ಚಿಗೆ ಕೊಡಲಿ ಎಂದು ನನ್ನ ಮನೋಭಾವ. ನನಗೆ ಇದರ ಬಗ್ಗೆ ಹೆಚ್ಚಿಗೆ ಮಾತನಾಡುವುದಕ್ಕೆ ಅರ್ಹತೆ ಕಡಿಮೆ ಎಂದು ಕಾಣುತ್ತದೆ, ಏಕೆಂದರೆ ನಾನು ಒಂದು ದಿವಸವೂ ಸಿನಿಮಾಕ್ಕೆ ಹೋಗಿಲ್ಲ, ಒಂದು ದಿವಸವೂ ಕೂಡ ರೇಸಿಗೆ ಹೋಗಿಲ್ಲ. ಇಸ್ಪೀಟ್ ಆಡುವುದಕ್ಕೆ ಮೊದಲೇ ಬರುವುದಿಲ್ಲ. ಅದಕ್ಕೋಸ್ಕರ ನನಗೆ ಇದರ ಬಗ್ಗೆ ಮಾತನಾಡಲು ಅರ್ಹತೆ ಇಲ್ಲ ಎಂದು ಹೇಳಿದ್ದೇನೆ. I have not stepped into the Race Course and the Cinema House except in 1931 when I was forced to go to a Cinema. ಈಗ ಹಣಕಾಸಿನ ದೃಷ್ಟಿಯಿಂದ, ಆರ್ಥಿಕ ದೃಷ್ಟಿಯಿಂದ ಈ ಸಂದರ್ಭದಲ್ಲಿ ಕೆಲವು ವಿಚಾರಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಒಂದನೆಯದಾಗಿ ಹೇಳುವುದಾದರೆ ಕೆಲವರಿಗೆ ಈ ಸಿನಿಮಾ ಹುಚ್ಚು ಜಾಸ್ತಿ ಇರುತ್ತದೆ, ನಾನು ಈ ಸಿನಿಮಾ, ನಾಟಕಗಳ ಬಗ್ಗೆ ಎಷ್ಟು ವಿರೋಧ ಮಾಡುತ್ತೇನೋ, ಅಷ್ಟೇ ಅಭಿಮಾನ, ಮಮತೆ ಈ ಸಿನಿಮಾ ನಾಟಕಗಳ ಬಗ್ಗೆ ನನ್ನ ಮನಸಿಗೆ ಇದೆ. ಈಗ ನನಗೆ ಬಂದಿರತಕ್ಕ ಪ್ರಶ್ನೆ ಇಷ್ಟೇ ಇವೊತ್ತು ಸಿನಿಮಾ ನೋಡುವುದಕ್ಕೆ ಹೋಗತಕ್ಕ ಜನರು ಏನು ಇದ್ದಾರೆ ಅವರು ಬಡವರಾಗಲಿ, ಮಧ್ಯಮ ವರ್ಗದವರಾಗಲಿ ಅವರಿಗೆ ಒಂದು ದೊಡ್ಡ ಸಂಭ್ರಮ. ಇವರು ಸಿನಿಮಾ ನೋಡಬೇಕಾದರೆ ಬಸ್ಸ್ ಕನ್‌ವೆಯನ್ಸ್ ಸಿಕ್ಕುವುದಿಲ್ಲ, ಕನ್‌ವೆಯನ್ಸ್‌ಗಾಗಿ ಹಣ ಖರ್ಚು

ಮಾಡಬೇಕಾಗುತ್ತದೆ, ಮತ್ತೆ ಸಿನಿಮಾ ಟಿಕೆಟ್ ಖರ್ಚು, ಇಷ್ಟೆಲ್ಲಾ ಕಷ್ಟಪಟ್ಟುಕೊಂಡು ಸಿನಿಮಾ ಏತಕ್ಕೆ ನೋಡಬೇಕು ಎಂದು ನಾನು ಮನೋಭಾವ ಇಟ್ಟುಕೊಂಡಿರತಕ್ಕದ್ದು. ಇವೊತ್ತು ಸರ್ಕಾರದವರು ಎಲ್ಲವನ್ನೂ ನ್ಯಾಷನಲೈಸ್ ಮಾಡಬೇಕು ಎಂದು ಹೊರಟಿದ್ದಾರೆ, ಹಾಗೆ ಈ ಸಿನಿಮಾ ಪ್ರಪಂಚ ಏತಕ್ಕೆ ನ್ಯಾಷನಲೈಸ್ ಮಾಡಲಿಲ್ಲ ಎಂದು ಯೋಚನೆ ಮಾಡಬೇಕಾಗಿದೆ. ಈಗ ಹೆಚ್ಚು ಹಣ ಸಂಪಾದನೆ ಮಾಡುವುದು ಇದ್ದರೆ ರಷ್ಯಾ ಮುಂತಾದ ಕಡೆಗಳಲ್ಲಿ ಯಾವರೀತಿ ಈ ಸಿನಿಮಾದಿಂದ ಹಣ ಸಂಪಾದನೆ ಮಾಡುತ್ತಾರೆ ಎನ್ನುವುದನ್ನು ನೋಡಬೇಕು, ಇವೊತ್ತು ನಾನು ಮನೋರಂಜನೆ ಬೇಡ ಎಂದು ಹೇಳುವುದಿಲ್ಲ. ಏರಗಟ್ಟಲೆ ಕಷ್ಟಪಡತಕ್ಕ ಜನರಿಗೆ ಮನೋರಂಜನೆ ಬೇಕಾಗುತ್ತದೆ ಅವರಿಗೆ ಯಾವ ತರಹ ಮನೋರಂಜನೆ ಬೇಕು, ಯಾವ ಕಾಸ್ಟಿನಲ್ಲಿ ಬೇಕು ಎಂದು ಯೋಚನೆ ಮಾಡಬೇಕಾಗುತ್ತದೆ. ಈಗ ಬೆಂಗಳೂರಿನಲ್ಲಿ ಇರುವಷ್ಟು ಸಿನಿಮಾ ಮಂದಿರಗಳು ಇಡೀ ಭಾರತದಲ್ಲೇ ಇಲ್ಲ ಎಂದು ಕಾಣುತ್ತದೆ ಅನೇಕ ಸಿನಿಮಾ ಮಂದಿರಗಳಲ್ಲಿ ಬಡವರಾಗಲಿ, ಸಾವುಕಾರರಾಗಲಿ, ಕ್ಯೂ ನಿಂತು ಟಿಕೆಟ್ ಸಿಕ್ಕದೆ ಒಬ್ಬರ ಮೇಲೆ ಒಬ್ಬರು ಬಿದ್ದು ಬೇಕಾದಷ್ಟು ಗಲಾಟೆಗಳು ಆಗುವುದು ಇದ್ದು, 3 ರೂಪಾಯಿ ಟಿಕೆಟ್‌ಗೆ 10 ರೂಪಾಯಿ ಕೊಟ್ಟು ಹೋಗುವುದು ಇದೆ, ಈ ರೀತಿ ಇರುವುದರಿಂದ ಈ ಟ್ಯಾಕ್ಸ್ 10 ಪೈಸೆ ಹೆಚ್ಚು ಕೊಡುವುದರಿಂದ ಅಂತಹ ಕಷ್ಟ ಏನು ಆಗಲಾರದು ಎಂದು ಕಾಣಿಸುತ್ತದೆ. ಈ ಸಂದರ್ಭದಲ್ಲಿ ಇನ್ನು ಕೆಲವಾರು ಅಂಶಗಳನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವೊತ್ತು ಇದರಲ್ಲಿ ಹೆಚ್ಚು ಲೋಪವಾಗುತ್ತಿದೆ ಹೆಚ್ಚು ಹಣ ಸೋರಿ ಹೋಗುತ್ತಿದೆ ಎಂದು ನಾನು ಅನೇಕ ಸಾರಿ ಕೇಳಿದ್ದೇನೆ. ಇದರಲ್ಲಿ ಏನಾಗಿದೆ ಎಂದರೆ ಎಂಟರಟೈನಮೆಂಟ್ ಟ್ಯಾಕ್ಸ್ 0 ಪರಸೆಂಟ್ ಕಳೆದುಕೊಂಡು ಲೋಕಲ್ ಬಾಡೀಸ್‌ಗೆ ಕೊಡುತ್ತಾರೆ, ಈಗ ಬೆಂಗಳೂರು ನಗರದಲ್ಲಿ 1 ಕೋಟಿ ರೂಪಾಯಿ ಎಂಟರಟೈನಮೆಂಟ್ ಟ್ಯಾಕ್ಸ್ ಬರುತ್ತದೆ. ಆದರಿಂದ ಇದು ಹೆಚ್ಚು ಭಾಗ ಸ್ಥಳೀಯ ಸಂಸ್ಥೆಗಳಿಗೆ ಹೋಗುವುದರಿಂದ ಸರ್ಕಾರ ಇದನ್ನು ವಸೂಲು ಮಾಡುವ ಜವಾಬ್ದಾರಿ ಒಪ್ಪಿಕೊಂಡಿದ್ದಾರೆ, ಅದು ಸರಿಯಾದ ರೀತಿಯಲ್ಲಿ ಆಗುತ್ತಾ ಇಲ್ಲ ಎಂದು ದೂರು ಕೇಳಿದ್ದೇನೆ. ಇವೊತ್ತು ನಾಗಣ್ಣನವರು ಇದ್ದಾರೆ ಅವರು ಸ್ವಚ್ಛವಾಗಿ ನಡೆಸಿಕೊಂಡು ಹೋಗುವವರು ಇದ್ದಾರೆ, ಇದೇ ರೀತಿ ಇನ್ನು ಕೆಲವು ಸಿನಿಮಾ ಮಂದಿರಗಳನ್ನು ಬಿಟ್ಟರೆ ಉಳಿದವರು ಡೂಪ್ಲಿಕೇಟ್ ಟಿಕೆಟ್ ಮಾಡಿಸಿ ಆಫೀಸರ್‌ಗಳನ್ನು ಸರಿಪಡಿಸಿಕೊಂಡು ಹೆಚ್ಚು ಭಾಗ ಹಣ ಸೋರಿ ಹೋಗತಕ್ಕದ್ದು ಇದೆ. ಇದರಿಂದ ಲೋಕಲ್ ಬಾಡೀಸ್‌ಗೂ ನಷ್ಟವಾಗುತ್ತದೆ, ಸರ್ಕಾರಕ್ಕೂ ನಷ್ಟವಾಗುತ್ತದೆ ಇದನ್ನು ತಡೆಗಟ್ಟಬೇಕು ಎಂದು ಹೇಳುತ್ತೇನೆ. ಅಲ್ಲದೇ ಈ ರೀತಿ ಸೋರಿ ಹೋಗತಕ್ಕ ಹಣದ ಬಗ್ಗೆ ಲೋಪವಾಗತಕ್ಕದ್ದನ್ನು ತಡೆಗಟ್ಟುವುದಕ್ಕೆ ಅನೇಕ ಕ್ರಮ ತೆಗೆದುಕೊಂಡಿದ್ದಾರೆ, ಆದರೂ ಈಗ ಏನಾಗಿದೆ ಎಂದರೆ ಬೇಲಿ ಎದ್ದು ಹೊಲಮೈದಂತೆ, ಎನ್‌ಫೋರ್‌ಸಿಂಗ್ ಆಫೀಸರ್‌ಗಳು ಇರುತ್ತಾರೆ ಅವರು ಶಾಮೀಲಾದಾಗ ಯಾವ ರೀತಿ ಕ್ರಮ ತೆಗೆದುಕೊಂಡರು ಕಷ್ಟವಾಗುತ್ತದೆ, ಆದ್ದರಿಂದ ಪ್ರಾಮಾಣಿಕರಾದಂತ, ದಕ್ಷತೆಯಿಂದ ಕೆಲಸ ಮಾಡತಕ್ಕಂತ ಅಧಿಕಾರಿಗಳನ್ನು ಹಾಕಿ ಟೆಸ್ಟ್ ಮಾಡಿಸಬೇಕಾಗುತ್ತದೆ, ಕೆಲವು ಅಧಿಕಾರಿಗಳನ್ನು ಆಗಿಂದಾಗ್ಗೆ ಬದಲಾವಣೆ ಮಾಡಿ ಕಲೆಕ್ಷನ್ ಯಾವರೀತಿ ಬರುತ್ತದೆ ಎಂದು ನೋಡಬೇಕಾಗುತ್ತದೆ. ತಪ್ಪು ಮಾಡಿದವರಿಗೆ ಶಿಕ್ಷೆ ಮಾಡಬೇಕೆಂದು ಇದ್ದಾರೆ. ಹೀಗೆ ಶಿಕ್ಷೆ ವಿಧಿಸುವಾಗ ಹೆಚ್ಚಿನ ರೀತಿಯಲ್ಲಿ ಶಿಕ್ಷೆ ವಿಧಿಸಬೇಕೆಂದು ಹೇಳುವವರಲ್ಲಿ ನಾನೂ ಒಬ್ಬ. ಇದರ ಬಗ್ಗೆ ನಾನು ತಿದ್ದುಪಡಿಗಳನ್ನು ತೆಗೆದುಕೊಂಡುಬಂದಿದ್ದೇನೆ. ಕೆಲವು ಹೊಸ ಹೊಸ ನಿಬಂಧನೆಗಳನ್ನು ತೆಗೆದುಕೊಂಡು ಬಂದು, ಕಲೆಕ್ಷನ್‌ನ್ನು ಉತ್ತಮಪಡಿಸುವುದಕ್ಕೆ ಸರ್ಕಾರದವರು ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ. ಇದರ ಬಗ್ಗೆ ನನ್ನ ಅಭ್ಯಂತರವೇನೂ ಇಲ್ಲ ಎಂದು ಹೇಳಬಯಸುತ್ತೇನೆ. ನಾನು ತಂದಿರುವ ತಿದ್ದುಪಡಿಗಳು ಚರ್ಚೆಗೆ ಬಂದಾಗ, ಆಗ ನಾನು ಇದರ ಬಗ್ಗೆ ಮಾತನಾಡಬಯಸುತ್ತೇನೆ ಇಷ್ಟು ಹೊತ್ತು ಮಾತನಾಡು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ, ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

4.00 P.M

† ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರ).— ಸನ್ಮಾನ್ಯ ಅಧ್ಯಕ್ಷಿಣಿಯವರೇ, ಮಾನ್ಯ ಅರ್ಥ ಸಚಿವರು ತಂದಿರುವ ಮಸೂದೆಯನ್ನು ನಾನು ವಿರೋಧಿಸುತ್ತೇನೆ. ಮಾನ್ಯ ಸದಸ್ಯರಾದ ಶ್ರೀಮಾನ್ ಟಿ. ಆರ್. ಶಾಮಣ್ಣನವರು ಮಾತನಾಡುತ್ತಾ, ನಾನು ಸಿನಿಮಾ ನೋಡುವವನಲ್ಲ; ನೋಡೇ ಇಲ್ಲ;

ಅಥವಾ ನೋಡಿದ್ದರೆ ಬಹಳ ಹಿಂದೆ ಒಂದು ಸಿನಿಮಾವನ್ನು ನೋಡಿರಬಹುದು; ಆದರೆ ನನ್ನ ಮಗನಿಗೆ ಸಿನಿಮಾ ಗೀಳು ಇದೆ ನನಗಿಲ್ಲ; ಆದುದರಿಂದ ಇದನ್ನು ಅನುಮೋದಿಸುತ್ತೇನೆ ಎಂದು ಹೇಳಿದರು. ಸಿನಿಮಾ ನೋಡುವುದು ಒಂದು ಕೆಟ್ಟ ಚಾಳಿ ಎಂದು ಮಾನ್ಯ ಸದಸ್ಯರು ತಿಳಿದಿದ್ದ, ಆ ಕಾರಣದಿಂದಲೇ ಬಹುಶಃ ಮಾನ್ಯ ಮಂತ್ರಿಗಳಿಗೆ ಬೆಂಬಲ ಕೊಟ್ಟು, ತೆರಿಗೆ ಹಾಕಿರುವುದು ಒಳ್ಳೆಯದೆಂದು ಹೇಳಿರಬಹುದು. ನಾನೂ ಕೂಡ ಸಿನಿಮಾ ಜಾಸ್ತಿ ನೋಡುವುದಿಲ್ಲ; ಎಲ್ಲೋ ಒಂದೊಂದು ಸಲ ನೋಡುತ್ತೇನೆ. ಆದರೆ ಸಿನಿಮಾ ನೋಡುವುದೊಂದು ಕೆಟ್ಟ ಚಾಳಿ ಎಂದು ನಾನು ತಿಳಿದುಕೊಂಡಿಲ್ಲ. ಇದೊಂದು ಮನರಂಜನೆಯ ಪ್ರಶ್ನೆ. ಸಮಾಜದಲ್ಲಿ ಹೆಚ್ಚು ಹೆಚ್ಚು ಮನೋರಂಜನೆ ಕಾರ್ಯಕ್ರಮಗಳು ಜರುಗಬೇಕು; ಹೆಚ್ಚು ಹೆಚ್ಚು ಸಾಂಸ್ಕೃತಿಕ ಚಟುವಟಿಕೆಗಳು ನಡೆಯಬೇಕು. ಇದು ಸಮಾಜದಲ್ಲಿ ಅತ್ಯವಶ್ಯಕ ಎನ್ನುವ ಮಾತನ್ನು ಎಲ್ಲ ಆರ್ಥಿಕ ತಜ್ಞರೂ, ಸಮಾಜ ಮುಂದುವರಿಯಬೇಕೆಂದು ಅಭಿಪ್ರಾಯ ಇಟ್ಟುಕೊಂಡಿರುವ ಸಮಾಜ ತಜ್ಞರು ಯಾರು ಯಾರು ಇದ್ದಾರೆ, ಅವರೆಲ್ಲರೂ ಒಪ್ಪಿಕೊಂಡಿದ್ದಾರೆ. ಒಬ್ಬ ಉನ್ನತ ವಿದೇಶಿ ಸಮಾಜ ತಜ್ಞರ ಪ್ರಕಾರ ಮನರಂಜನೆ ಎನ್ನುವುದು ಮನುಷ್ಯನಿಗೆ ಅತ್ಯವಶ್ಯಕ. ಏಕೆಂದರೆ, ಮನರಂಜನೆಯಿಂದಾಗಿ ದಕ್ಷತೆ ಜಾಸ್ತಿಯಾಗುತ್ತದೆ ಎನ್ನುವುದು ಆ ತಜ್ಞರ ಅಭಿಪ್ರಾಯ. ಇದರಲ್ಲಿ ಬಹಳ ಅರ್ಥವಿದೆ ಎಂದು ನನಗನ್ನಿಸುತ್ತದೆ. ಈಗ ಉದಾಹರಣೆಗಾಗಿ ಕಾರ್ಮಿಕರನ್ನು ತೆಗೆದುಕೊಳ್ಳೋಣ. ಸಾಮಾನ್ಯವಾಗಿ ಮನೋರಂಜನಾ ಕಾರ್ಯಕ್ರಮಗಳು ಹೆಚ್ಚು ಹೆಚ್ಚು ನಡೆಯುವುದು ನಗರಗಳಲ್ಲಿ, ಗ್ರಾಮಾಂತರ ಪ್ರದೇಶಗಳಲ್ಲಿ ಅಷ್ಟಾಗಿ ಇಲ್ಲ. ಗ್ರಾಮಾಂತರ ಪ್ರದೇಶಗಳಲ್ಲೂ ಎಲ್ಲ ರೀತಿಯ ಮನರಂಜನೆ ಹೆಚ್ಚಿನ ರೀತಿಯಲ್ಲಿ ಇರಬೇಕು ಎನ್ನುವುದು ನನ್ನ ಸ್ಪಷ್ಟ ಅಭಿಪ್ರಾಯ. ಇದರಲ್ಲಿ ನನ್ನ ಭಿನ್ನಾಭಿಪ್ರಾಯವಿಲ್ಲ. ಈ ಉದ್ದೇಶ ಸಾಧನೆಗಾಗಿ, ಸರ್ಕಾರದವರು ಕರ್ನಾಟಕ ಫಿಲಂ ಡೆವಲಪ್‌ಮೆಂಟ್ ಕಾರ್ಪೊರೇಷನ್ ಮೂಲಕ ನಮ್ಮ ರಾಜ್ಯದ ಗ್ರಾಮಾಂತರ ಪ್ರದೇಶಗಳಲ್ಲಿ ಚಲನಚಿತ್ರ ಮಂದಿರಗಳನ್ನು ಕಟ್ಟಿಸಬೇಕೆಂದು ಯೋಚನೆ ಮಾಡುತ್ತಿದ್ದಾರೆ ಎನ್ನುವುದು ತಿಳಿದುಬಂದಿದೆ. ಈ ಕಾರ್ಯಕ್ರಮದ ಅಂಗವಾಗಿ, ಚಿಕ್ಕಜೋಗಿಹಳ್ಳಿಯಲ್ಲಿ ಒಂದು ಚಿತ್ರಮಂದಿರ ಕಟ್ಟಿಸಿದರು, ನಂತರ ಬೇರೆ ಕಡೆ ಕಟ್ಟಿಸಲಿಲ್ಲ. ಏಕೆ ಎಂದು ನನಗೆ ಅರ್ಥವಾಗಲಿಲ್ಲ. ಇದೊಂದು ಕರ್ಮಕಾಂಡವೋ ಅಥವಾ ಮರ್ಮಕಾಂಡವೋ ನನಗೆ ಗೊತ್ತಾಗಿಲ್ಲ; ಅಂತೂ ಒಂದು ಕಾಂಡವಾಯಿತು. ಆದುದರಿಂದ, ನಗರಗಳಲ್ಲಿರುವಂತೆ ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚು ಹೆಚ್ಚು ಮನರಂಜನೆಗಳು ಜನರಿಗೆ ಸಿಗುವಂತೆ ಮಾಡಬೇಕು ಎನ್ನುವುದೇ ನನ್ನ ಸ್ಪಷ್ಟ ಅಭಿಪ್ರಾಯ. ಕಾರ್ಮಿಕರಿಗೆ ಹೆಚ್ಚು ಹೆಚ್ಚು ಮನರಂಜನೆ ದೊರೆತಂತೆಲ್ಲಾ, ಅವರು ಮಾಡುವ ಕೆಲಸದಲ್ಲಿ ದಕ್ಷತೆ ಜಾಸ್ತಿಯಾಗುತ್ತದೆ ಎಂದು ಕೆಲವು ತಜ್ಞರು ಅಂಕಿ-ಅಂಶಗಳ ಆಧಾರದ ಮೇಲೆ ನಿರೂಪಿಸಿದ್ದಾರೆ. ಫ್ರಾನ್ಸ್ ದೇಶದ ಕಾರ್ಮಿಕರಿಗೆ, ಅವರ ಕಾರ್ಖಾನೆಯ ಕೆಲಸ ಬಿಟ್ಟರೆ, ಬೇರೆ ಕೆಲಸವಿರುವುದಿಲ್ಲ. ಅಲ್ಲಿನ ಕಾರ್ಮಿಕರು ಬೆಳಗ್ಗೆ ಎದ್ದು ಕಾರ್ಖಾನೆಗೆ ಹೋಗಬೇಕು; ನಂತರ ಸಾಯಂಕಾಲ ಬರಬೇಕು. ಹೀಗಾಗಿ ಅವರಿಗೆ ಯಾವ ರೀತಿಯ ಮನರಂಜನೆಯೂ ಇರುವುದಿಲ್ಲ. ಅವರು ಸಾಯಂಕಾಲ ಮನೆಗೆ ಬಂದರೆ, ಸ್ವಲ್ಪ ಸುಸ್ತಾಗಿರುತ್ತಾರೆ; ಮಾರನೆಯ ದಿವಸ ಬೆಳಿಗ್ಗೆ ಎದ್ದು ಕೆಲಸಕ್ಕೆ ಹೋಗಬೇಕಾಗುತ್ತದೆ. ಯಾವ ಸಮಾಜದಲ್ಲಿ ಕೈಗಾರಿಕೆಗಳು ಜಾಸ್ತಿ ಇವೆ, ಅಂತಹ ಸಮಾಜಗಳಲ್ಲಿ ಈ ರೀತಿಯ ಪರಿಸ್ಥಿತಿ ಇರುವುದರಿಂದ, ಅಲ್ಲಿನ ಜನರು ದಿನವೂ ಯಾಂತ್ರಿಕವಾಗಿ ಕೆಲಸ ಮಾಡುವ ಪರಿಸ್ಥಿತಿ ಇರುತ್ತದೆ. ಅಂತಹವರಿಗೆ ಮನರಂಜನೆ ಅಗತ್ಯವಿರುತ್ತದೆ. ಹೀಗೆ, ಅವರು ಮನರಂಜನೆ ಒದಗಿಸಿದರೆ, ಅವರು ಮಾಡುವ ಕೆಲಸದಲ್ಲಿ ದಕ್ಷತೆ ತೋರಿಸುತ್ತಾರೆ ಎನ್ನುವುದು ಅಂಕಿ-ಅಂಶಗಳ ಆಧಾರದ ಮೇಲೆ ಆ ತಜ್ಞರು ಹೇಳಿದ್ದಾರೆ. ಈ ಒಂದು ದೃಷ್ಟಿಯಿಂದ ಮನರಂಜನೆ ಅತ್ಯಗತ್ಯವಾಗಿ ಇರಬೇಕು ಎಂದು ನಾನು ಹೇಳಬಯಸುತ್ತೇನೆ.

ಇನ್ನು ಎರಡನೆಯದಾಗಿ, ಹೆಚ್ಚು ಹೆಚ್ಚು ಮನರಂಜನೆ ಕಾರ್ಯಕ್ರಮಗಳು ನಡೆಯುತ್ತಿದ್ದರೆ, ಅದರಲ್ಲಿ ಪಾಲ್ಗೊಳ್ಳುವ ಕಲಾವಿದರಿಗೆ ಜೀವನ ನಡೆಸುವುದಕ್ಕೆ ಅನುಕೂಲವಾಗುತ್ತದೆ. ಅಷ್ಟೇ ಅಲ್ಲದೇ, ಇವರಿಂದ ರಾಜ್ಯದ ಉತ್ಪನ್ನ ಕೂಡ ಜಾಸ್ತಿಯಾಗುತ್ತದೆ. ಇದರಿಂದ ಕಲೆಗೆ ಪ್ರೋತ್ಸಾಹ ಕೊಟ್ಟಂತಾಗುತ್ತದೆ ಮತ್ತು ದೇಶದ ಅಭಿವೃದ್ಧಿಗೂ ಸಾಧಕವಾಗುತ್ತದೆ. ನನ್ನ ಅಭಿಪ್ರಾಯದಲ್ಲಿ, ಮನರಂಜನೆ ಎಂದರೆ ಬರೀ ಸಿನಿಮಾ ಮಾತ್ರವಲ್ಲ. ಮನರಂಜನೆ ತೆರಿಗೆ ಕೇವಲ ಚಲನಚಿತ್ರಗಳಿಗೆ ಮಾತ್ರ ಅನ್ವಯಿಸುತ್ತದೆ ಎಂದು ನಾನು ತಿಳಿದುಕೊಂಡಿಲ್ಲ. ಮಸೂದೆಯಲ್ಲಿರುವ ವ್ಯಾಖ್ಯಾನದ ಪ್ರಕಾರ "In addition to the entertainment tax, and surchage on additional tax shall be levied for admission to an entertainment". "ಎಂಟರಟೇನ್‌ಮೆಂಟ್" ಎಂಬ ಪದಕ್ಕೆ ಏನು ವ್ಯಾಖ್ಯಾನ ಕೊಟ್ಟಿದ್ದಾರೆ ಎಂದು ನೋಡಿದರೆ, ಇದು ಬರೀ ಸಿನಿಮಾಗೆ ಮಾತ್ರವಲ್ಲ ಎಂದು ಗೊತ್ತಾಗುತ್ತದೆ. ರೇಸ್ ಕೋರ್ಸ್, ಸರ್ಕಸ್ ಆಟಪಾಟಗಳು, ನಾಟಕ, ನೃತ್ಯ ಮುಂತಾದವುಗಳಿಗೆಲ್ಲಾ ಇದು ಅನ್ವಯಿಸುತ್ತದೆ. ಎಲ್ಲ ರೀತಿಯ ಮನರಂಜನ ಕಾರ್ಯಕ್ರಮಗಳಿಗೂ ಇದು ಅನ್ವಯಿಸುತ್ತದೆ. ನಮ್ಮ ದೇಶದಲ್ಲಿ ಕಲೆಗೆ

ಹೆಚ್ಚು ಹೆಚ್ಚು ಪ್ರೋತ್ಸಾಹ ಕೊಡಬೇಕು; ಸಾಂಸ್ಕೃತಿಕ ಚಟುವಟಿಕೆಗಳು ಹೆಚ್ಚು ಹೆಚ್ಚು ಬೆಳೆಯುವುದಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಹೇಳುವಾಗ ಇವುಗಳ ಮೇಲೆ ಹೆಚ್ಚು ಹೆಚ್ಚು ತೆರಿಗೆಗಳನ್ನು ಹಾಕಿದರೆ, ನಾವು ಅವುಗಳಿಗೆ ಪ್ರೋತ್ಸಾಹ ಕೊಟ್ಟಂತಾಗುತ್ತದೆಯೇ? ಇದನ್ನು ಸರ್ಕಾರದವರು ಯೋಚನೆ ಮಾಡ ಬೇಕಾಗಿದೆ. ನಾವು ಹೆಚ್ಚು ಹೆಚ್ಚು ತೆರಿಗೆಗಳನ್ನು ಇವುಗಳ ಮೇಲೆ ವಿಧಿಸುತ್ತಾ ಇರುವುದರಿಂದ, ಸಾಂಸ್ಕೃತಿಕ ಚಟುವಟಿಕೆಗಳು ಮತ್ತು ಮನರಂಜನಾ ಕಾರ್ಯಕ್ರಮಗಳು ಹೆಚ್ಚು ಹೆಚ್ಚು ನಡೆಯುವುದಕ್ಕೆ ಅವಕಾಶವಿಲ್ಲವಾಗಿದೆ. ಮಾನ್ಯ ಸದಸ್ಯರಾದ ಶ್ರೀಮಾನ್ ಟಿ. ಆರ್. ಶಾಮಣ್ಣನವರು ಮಾತನಾಡುತ್ತಾ, ಸೋವಿಯತ್ ರಷ್ಯಾ ಕುರಿತು ಮಾತನಾಡಿದರು. ನಾವು ಸಮತಾವಾದ ತತ್ವವನ್ನು ಒಪ್ಪಿಕೊಂಡ ಜನ. ಸಾಮಾನ್ಯವಾಗಿ, ಸಮತಾವಾದ ತತ್ವವನ್ನನುಸರಿಸುವ ಎಲ್ಲ ದೇಶಗಳಲ್ಲೂ ಸಾಂಸ್ಕೃತಿಕ ಚಟುವಟಿಕೆಗಳಿಗೆ ಹೆಚ್ಚು ಆದ್ಯತೆ ಕೊಡುತ್ತಾರೆ ಎನ್ನುವುದು ನನ್ನ ಅಭಿಪ್ರಾಯ ಇದನ್ನು ನಾವು ಇವತ್ತಿನ ದಿವಸ ನೋಡು ತ್ತಿದ್ದೇವೆ. ಸೋವಿಯತ್ ರಷ್ಯಾದಲ್ಲಿ ಸಿನಿಮಾಗಳಿಗೆ, ನಾಟಕಗಳಿಗೆ, ನೃತ್ಯಗಳಿಗೆ ಮತ್ತು ಬ್ಯಾಲೆಗೆ ನೀಡು ವಷ್ಟು ಪ್ರೋತ್ಸಾಹ ಬೇರೆ ಯಾವ ದೇಶದಲ್ಲೂ ನೀಡುತ್ತಿಲ್ಲ. ಅಲ್ಲಿ ಟಿಕೆಟ್ಟುಗಳ ದರ ಕೂಡ ಅತಿ ಕಡಿಮೆ ಇದೆ. ಅಲ್ಲಿನ ಜನರು ಬಹಳ ಕಡಿಮೆ ಖರ್ಚಿನಲ್ಲಿ ಮನರಂಜನಾ ಕಾರ್ಯಕ್ರಮಗಳನ್ನು ನೋಡಬಹುದಾಗಿದೆ. ಇದರಿಂದ ಅವರು ತಮ್ಮ ದಕ್ಷತೆಯನ್ನು ಹೆಚ್ಚು ಮಾಡಿಕೊಳ್ಳುವುದಕ್ಕೆ ಅವಕಾಶವಾಗಿದೆ ಎಂದು ನಾವು ಸಮತಾವಾದ ರಾಷ್ಟ್ರಗಳಿಂದ ನೋಡಿ ಕಲಿಯಬೇಕಾಗಿದೆ. ಸಮತಾವಾದ ರಾಷ್ಟ್ರವನ್ನೇ ಪೂರ್ತಿಯಾಗಿ ಅನುಕರಣೆ ಮಾಡಬೇಕೆಂದು ನಾನು ಹೇಳುವುದಿಲ್ಲ. ನಮ್ಮ ದೇಶಕ್ಕೆ ಅನುಗುಣವಾಗುವಂತೆ ನಾವು ವ್ಯವಸ್ಥೆ ಮಾಡುವುದು ಅಗತ್ಯವೆಂದು ನಾನು ಒಪ್ಪಿಕೊಳ್ಳುತ್ತೇನೆ. ಆದರೆ, ತತ್ವಕ್ಕೆ ವಿರುದ್ಧವಾಗಿ ಹೋಗುವ ರೀತಿಯಲ್ಲಿ ಸರ್ಕಾರ ನಡವಳಿಕೆಯನ್ನು ತೆಗೆದುಕೊಂಡು ಬಂದರೆ, ನಾನಾಗ ಅದನ್ನು ವಿರೋಧಿಸುತ್ತೇನೆ.

ಶ್ರೀ ಎಂ. ವೈ. ಘೋರ್ಪಡೇ.—ರಷ್ಯಾ ದೇಶದಲ್ಲೂ ಟಿಕೆಟ್ ಪದ್ಧತಿ ಇದೆ.

ಶ್ರೀ ಎಂ. ಎಸ್. ಕೃಷ್ಣನ್.—ಆದರೆ, ಆ ಟಿಕೆಟ್ ಮೇಲೆ ಸರ್‌ಚಾರ್ಜ್ ಇಲ್ಲ; ಸರ್‌ಚಾರ್ಜ್ ಮೇಲೆ ಅಡಿಷನಲ್ ಟ್ಯಾಕ್ಸ್ ಇಲ್ಲ. ನಮ್ಮ ಸರ್ಕಾರದವರು ಮುಂದಿನ ವರ್ಷಕ್ಕೆ ಸೂಪರ್ ಚಾರ್ಜ್‌ಸ್ ಎಂದು ಹಾಕುತ್ತಾರೆ ಅನಂತರ. ಅದರ ಮೇಲೆ ಸೂಪರ್ ಅಡಿಷನಲ್ ಚಾರ್ಜ್‌ಸ್ ಎಂದು ಹಾಕಿಬಿಡುತ್ತಾರೆ. ಆ ರೀತಿಯ ಮನೋಭಾವ ಈ ಸರ್ಕಾರಕ್ಕೆ ಇದ್ದಂತೆ ಕಾಣುತ್ತದೆ. ಆದರೆ, ಇದ್ಯಾವುದನ್ನೂ ಇವರು ನೇರ ವಾಗಿ ಹಾಕುತ್ತಾ ಇಲ್ಲ; ಎಲ್ಲ ರಿವರ್ಸ್ ಡೈರೆಕ್ಷನ್‌ನಲ್ಲಿ ಹಾಕುತ್ತಿದ್ದಾರೆ. ತೆರಿಗೆ ಹಾಕುವುದೇ ಬೇಡ, ಎಲ್ಲ ರನ್ನೂ ಬಿಟ್ಟುಬಿಡಿ ಎಂದು ನನ್ನ ಅಭಿಪ್ರಾಯವಲ್ಲ. ಹಾಕುವ ತೆರಿಗೆ ಆದಷ್ಟು ಕಡಿಮೆ ಇರಬೇಕೆಂಬುದು ನನ್ನ ಅಭಿಪ್ರಾಯ. ತೆರಿಗೆಗಳನ್ನು ಹೆಚ್ಚು ಹೆಚ್ಚು ಹಾಕಿ ಅದರ ಮೇಲೆ ಪುನಃ ಸರ್‌ಚಾರ್ಜ್ ಹಾಕಿದರೆ, ಮನರಂಜನೆ ಎನ್ನುವುದು ದುಬಾರಿಯಾಗುತ್ತದೆಯೋ ಅಥವಾ ಕಡಿಮೆಯಾಗುತ್ತದೆಯೋ ಎಂಬುದನ್ನು ಸರ್ಕಾರದವರು ಸ್ವಲ್ಪ ಯೋಚನೆ ಮಾಡಬೇಕಾಗಿದೆ. ಇದು ಸಮತಾವಾದ ರಾಷ್ಟ್ರಗಳ ಪರಂಪರೆಗೆ ವಿರುದ್ಧವಾಗಿದೆಯೋ ಅಥವಾ ಪರವಾಗಿದೆಯೋ ಎಂಬುದನ್ನು ಯೋಚನೆ ಮಾಡಬೇಕಾಗಿದೆ. ಇದು ಸಮತಾವಾದ ತತ್ವಕ್ಕೆ ತೀರ ವಿರುದ್ಧ ವಾಗಿರುವುದರಿಂದ, ಇದು ಸರ್ವಥಾ ನ್ಯಾಯವಲ್ಲವೆಂದು ನನ್ನ ಸ್ಪಷ್ಟ ಅಭಿಪ್ರಾಯ.

ನಮ್ಮ ದೇಶದಲ್ಲಿ ಈ ತೆರಿಗೆ ಎನ್ನುವುದು ಹೇಗೆ ಹುಟ್ಟಿಕೊಂಡಿತು ಎನ್ನುವುದನ್ನು ಸ್ವಲ್ಪ ಅವ ಲೋಕನೆ ಮಾಡೋಣ. ನಮ್ಮ ದೇಶದವರು ಈ ತೆರಿಗೆ ವಿಧಿಸುವುದನ್ನು ಸ್ವಲ್ಪಮಟ್ಟಿಗೆ ಬ್ರಿಟಿಷರಿಂದ ಕಲಿತುಕೊಂಡಿದ್ದಾರೆ. ಯಾವ ಬ್ರಿಟಿಷರನ್ನು ನಾವು ಹೋರಾಟ ಮಾಡಿ ಈ ದೇಶದಿಂದ ತೊಲಗಿಸಿದೆವೋ, ಆ ಬ್ರಿಟಿಷರಿಂದ ನಾವು ಈ ತೆರಿಗೆಗಳನ್ನು ಹೇಗೆ ಹಾಕುವುದು ಎನ್ನುವುದನ್ನು ಕಲಿತುಕೊಂಡೆವು. ನಾವು ಅವರಿಂದ ಒಳ್ಳೆಯದನ್ನು ಕಲಿತುಕೊಂಡಿದ್ದರೆ ಪರವಾಗಿಲ್ಲ; ಆದರೆ, ಇದು ಕೆಟ್ಟದ್ದು. ಈ ತೆರಿಗೆ ಮೊಟ್ಟ ಮೊದಲು ಬಂಗಾಳದಲ್ಲಿ ೧೯೨೨ನೇ ಇಸವಿಯಲ್ಲಿ ಇಂಟ್ರಡ್ಯೂಸ್ ಮಾಡಲಾಯಿತು. ಅಲ್ಲಿಂದ ಈ ಮನರಂಜನೆ ತೆರಿಗೆಯ ಚರಿತ್ರೆ ಪ್ರಾರಂಭವಾಯಿತು. ನಂತರ, ೧೯೨೩–೨೬ರ ಸುಮಾರಿನಲ್ಲಿ ಮುಂಬಯಿ ಮತ್ತು ಮದರಾಸಿನಲ್ಲಿ ಇದನ್ನು ಇಂಟ್ರಡ್ಯೂಸ್ ಮಾಡಲಾಯಿತು. ೧೯೩೬ರಲ್ಲಿ ಪಂಜಾಬಿನಲ್ಲಿ ಈ ತೆರಿಗೆಯನ್ನು ತೆಗೆದುಕೊಂಡು ಬಂದರು ಎಂದು ತಿಳಿದುಬರುತ್ತದೆ. ಆ ಒಂದು ಆ ಒಂದು ಸಂದರ್ಭದಲ್ಲಿ ನಮ್ಮ ದೇಶದ ನಾಯಕರು. ಸ್ವಾತಂತ್ರ್ಯಕ್ಕಾಗಿ ಹೋರಾಟವನ್ನು ನಡೆಸಿದಂತ ನಾಯಕರು, ನಿಮ್ಮ ಪಕ್ಷಕ್ಕೆ ಸೇರಿದ ನಾಯಕರುಗಳು ಏನು ಹೇಳಿದರು ಎಂದರೆ ಈ ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್ ಹಾಕುವುದು ಸರಿಯಾದುದಲ್ಲವೆಂದು ಹೇಳಿದ್ದಾರೆ. ಸಾಮ್ರಾಜ್ಯವಾದಿಗಳು ದುಬಾರಿಯಾಗಿ ತೆರಿಗೆಯನ್ನು ಹಾಕುತ್ತಿದ್ದರು. ಈ ತೆರಿಗೆಗಳನ್ನು ಹಾಕಕೂಡದು ಎಂದು ಸತ್ಯಾಗ್ರಹ ಮಾಡಿದೆವು. ಜನ

ಸಾಮಾನ್ಯರ ಮೇಲೆ ಎಂಟರ್‌ಟೈನ್‌ಮೆಂಟ್ ಟ್ಯಾಕ್ಸನ್ನು ಹಾಕುತ್ತಾರೆಂದರೆ ಅದು ಸರಿಯಾದುದಲ್ಲ, ನ್ಯಾಯವಾದುದಲ್ಲ. ಸಾಮ್ರಾಜ್ಯಶಾಹಿಗಳ ಪ್ರತೀಕವಾಗಿದ್ದಂತ ಇದನ್ನು ಎದುರಿಸಬೇಕೆಂದು ವಿರೋಧ ಮಾಡಿದಂತ ನಾಯಕರುಗಳೂ ಇದ್ದಾರೆ. ಈ ದಿನ ನಾವು ಅವರನ್ನು ನೆನಸಿಕೊಳ್ಳಬೇಕು. ಆ ದಿನ ವಿರೋಧ ಮಾಡಿದಂತ ನಾಯಕರುಗಳು ಈಗ ಇದರ ಪರವಾಗಿದ್ದಾರೆಂದರೆ ಇದು ಶೋಚನೀಯವಾದ ವಿಚಾರವಲ್ಲವೇ ಅನ್ಯಾಯವಾದ ವಿಚಾರವಲ್ಲವೇ ? ಇದು ಸಾಮ್ರಾಜ್ಯಶಾಹಿ ಪರಂಪರೆಗೆ ಅನುಗುಣವಾಗಿ ಆಗಿದೆ ಎನ್ನುವುದನ್ನು ನಾವು ಯೋಚನೆ ಮಾಡಬೇಕಾಗಿದೆ. ಆದುದರಿಂದ ನನಗೆ ಏನು ಅನ್ನಿಸುತ್ತದೆ ಎಂದರೆ ಈ ಒಂದು ದೃಷ್ಟಿಯಿಂದ ಸಹ ಈ ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್ ಎನ್ನುವುದು ಸರಿಯಾದುದಲ್ಲ, ನ್ಯಾಯವಾದುದಲ್ಲವೆಂದು ಸ್ಪಷ್ಟವಾಗಿ ಹೇಳಬೇಕಾಗಿದೆ. ಇನ್ನೊಂದು ವಿಷಯವೇನೆಂದರೆ ಈ ಎಂಟರ್‌ಟೈನ್‌ಮೆಂಟ್ ಟ್ಯಾಕ್ಸನಿಂದ ಸುಮಾರು ಹಣವನ್ನು ಗಳಿಸುತ್ತಿದ್ದಾರೆ ಈ ಒಂದು ತೆರಿಗೆ ಕಳೆದ ವರ್ಷಗಳಲ್ಲಿ ಎಷ್ಟು ಜಾಸ್ತಿಯಾಗಿದೆ ಎಂದರೆ ಅದರ ಬಗ್ಗೆ ಅಂಕಿ ಅಂಶಗಳನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. While entertainment tax generally fall· on the exhibitors and organisers of this show but its burden is borne by the public entertained in these shows. ದೇಶಕ್ಕೆ ಸ್ವಾತಂತ್ರ್ಯ ಬಂದಮೇಲೆ ರಿಪಬ್ಲಿಕ್ ಆದಮೇಲೆ ಅಲ್ಲಿಂದ ಇಲ್ಲಿಯವರೆಗೆ ೨೦ ವರ್ಷದಲ್ಲಿ ಏನಾಗಿದೆ ಎಂದರೆ, ಪೇಜ್ ೧೬೦ ರಲ್ಲಿ ಏನಿದೆ ಎಂದರೆ—

> "During the period under review, the revenue from entertainment tax has increased by 800 percent, while the total tax revenue badincreased by 142 percent the incidence of the taxation is obviously on on the consumers...The organisers are responsible for the tax socollected by the Government."

Now the point is this : ಇದರ ಬಗ್ಗೆ ದೇಶಾದ್ಯಂತ ನೋಡಿದರೆ ೮೦೦ ಪರ್ಸೆಂಟ್ ಟ್ಯಾಕ್ಸ್ ಜಾಸ್ತಿಯಾಗಿದೆ. ಈ ಒಂದು ಹೊರೆ ಯಾರ ಮೇಲೆ ಬಿದ್ದಿದೆ ಎಂದರೆ ಜನಸಾಮಾನ್ಯರ ಮೇಲೆ ಬಿದ್ದಿದೆ ಎಂಬುದನ್ನು ನಾವು ತಿಳಿಪುಕೊಳ್ಳಬೇಕಾಗಿದೆ. ಮಾನ್ಯ ಸಚಿವರು ನಿನ್ನೆ ಮಾತನಾಡುತಾ ಡೈರೆಕ್ಟ್ ಟ್ಯಾಕ್ಸನ್ನು ಏತಕ್ಕೆ ಅಪೋಸ್ ಮಾಡುತ್ತಾರೆ ಎಂದು ಕೇಳಿದರು. ಈ ಇನ್‌ಡೈರೆಕ್ಟ್ ಟ್ಯಾಕ್ಸನ್ನು ಅವರ ಮೇಲೆ ಹೊರಿಸುವುದಿಲ್ಲ ಎನ್ನುವ ರೀತಿಯಲ್ಲಿ ಡೈರೆಕ್ಟ್ ಟ್ಯಾಕ್ಸನ್ನು ಪ್ರತಿಪಾದನೆ ಮಾಡಿದ ಮಂತ್ರಿಯವರು ಈ ಇನ್‌ಡೈರೆಕ್ಟ್ ಟ್ಯಾಕ್ಸನ್ನು ಏತಕ್ಕೆ ಹಾಕುತ್ತಾರೆ ಎಂದು ಕೇಳಬೇಕಾಗಿದೆ ಕಳೆದ ೨೦ ವರ್ಷದಲ್ಲಿ ೮೦೦ ಪರ್ಸೆಂಟ್ ಟ್ಯಾಕ್ಸ್ ಜಾಸ್ತಿಯಾಗಿರುವುದು ಮಾತ್ರವಲ್ಲ ಕರ್ನಾಟಕವನ್ನು ತೆಗೆದುಕೊಂಡರೆ ಮೈಸೂರ್ ಟ್ಯಾಕ್ಸೇಷನ್ ಅಂಡ್ ರಿಸೋರ್ಸಸ್ ಎನ್‌ಕ್ವೈರಿ ಕಮಿಟಿಯಲ್ಲಿ, ೧೯೬೯ರಲ್ಲಿ ಭೂತಲಿಂಗಂ ಕಮಿಟಿಯವರೂ ಸಹ ಇದರ ಬಗ್ಗೆ ಅಂಕಿಅಂಶಗಳನ್ನು ಕೊಟ್ಟಿದ್ದಾರೆ. ೧೯೬೦-೬೧ರಲ್ಲಿ ೬೬.೪೦ ಲಕ್ಷ ಇದ್ದುದು ೧೯೭೧-೭೨ರಲ್ಲಿ ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್ ೨.೮ ಲಕ್ಷವಾಗಿದೆ. ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್/ ಸಿನಿಮಾ ಷೋ ಟ್ಯಾಕ್. ಸರ್‌ಚಾರ್ಜ ಆಫ್ ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್, ಸರ್‌ಚಾರ್ಜ್ ಆಫ್ ಸಿನಿಮಾ ಷೋ ಟ್ಯಾಕ್ಸ್ ಮತ್ತು ಮಿಸಲೇನಿಯಸ್ ಇವೆಲ್ಲಾ ಸೇರಿ ಟೋಟಲ್ ಟ್ಯಾಕ್ಸನ್ನು ತೆಗೆದುಕೊಂಡರೆ ೧೯೬೦-೬೧ರಲ್ಲಿ ೭೧.೬೦ ಲಕ್ಷ, ೧೯೬೧-೬ ರಲ್ಲಿ ೮೧.೮೯ ಲಕ್ಷ ೧೯೬೨-೬೩ರಲ್ಲಿ ೧೦೨.೪೪ ಲಕ್ಷ, ೧೯೬೩-೬೪ರಲ್ಲಿ ೧೧೯.೮೮ ಲಕ್ಷ, ೧೯೬೪-೬೫ರಲ್ಲಿ ೧೩೦.೫೩ ಲಕ್ಷ, ೧೯೬೫-೬೬ರಲ್ಲಿ ೧೫೧.೮೬ ಲಕ್ಷ, ೧೯೬೬-೬೭ರಲ್ಲಿ ೧೮೮.೦೨ ಲಕ್ಷ, ೧೯೬೭-೬೮ರಲ್ಲಿ ೨೧೧.೪೦ ಲಕ್ಷ, ೧೯೬೨-೬೯ರಲ್ಲ ೨೪೧.೬೨ ಲಕ್ಷ, ೧೯೬೯-೭೦ರಲ್ಲಿ ೩೬೪.೫೦ ಲಕ್ಷ ೧೯೭೦-೭೧ ರಲ್ಲಿ ೩೩೩.೦೫ ಲಕ್ಷ, ೧೯೭೧-೭೨ ರಲ್ಲಿ ೩೫೫.೦೫ ಲಕ್ಷ ಆಗಿದೆ ಅಂದರೆ ಇದು ಒಂದಕ್ಕೆ ೫ರಷ್ಟು ಜಾಸ್ತಿಯಾಗಿದೆ. ಕರ್ನಾಟಕ ರಾಜ್ಯದಲ್ಲಿಯೂ ಸಹ ಒಂದಕ್ಕೆ ೫ರಷ್ಟು ಈ ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್ ಜಾಸ್ತಿಯಾಗಿದೆ. ೧೯೬೦-೬೧ರಲ್ಲಿ ಇದು ಹೆಚ್ಚಿದ್ದು ೧೦ ವರ್ಷದಲ್ಲಿ ಜಾಸ್ತಿಯಾಗಿರುವುದನ್ನು ನಾವು ಗಮನಿಸಬೇಕಾಗಿದೆ ಇದು ಏನು ತೋರಿಸುತ್ತದೆ ಎಂದರೆ ನೀವು ಮನೋರಂಜನೆ ತೆರಿಗೆಯನ್ನು ಹಾಕುತ್ತಿರುವ ದಾರಿ ಜನಸಾಮಾನ್ಯರ ಮೇಲೆ ಕಡಿಮೆ ದರದಲ್ಲಿ ಇರಬೇಕು, ಆದರಿಂದಾಗಿ ಅವರಿಗೆ ದಕ್ಷತೆಗೆ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಅಭಿರುಚಿ, ಅವಕಾಶಗಳನ್ನು ಮಾಡಿಕೊಡಬೇಕೆಂಬ ಅಭಿಪ್ರಾಯವನ್ನು ಬಿಟ್ಟು ಪುನ: ಪುನ: ತೆರಿಗೆಗಳನ್ನು ಹೊರಿಸುವ ಮನೋಭಾವವನ್ನು ತೋರಿಸುತ್ತದೆಂದು ಹೇಳಬೇಕಾಗಿದೆ. ಆದುದರಿಂದ ಇದನ್ನು ವಿರೋಧಿಸಬೇಕಾಗಿದೆ. ೧೯೭೧-೭೨ ರಲ್ಲಿ ಇರುವ ಅಂಕಿಅಂಶಗಳ ಪ್ರಕಾರ ೧೯೬೬ಕ್ಕೆ ಒಂದರೆ ೮೦೦ ಪರ್ಸೆಂಟ್ ಇರುವುದು ೧೦೦೦ ಪರ್ಸೆಂಟ್‌ಗೆ ಏರುತ್ತದೆ. ಇದು ನಮ್ಮ ಕರ್ನಾಟಕ ರಾಜ್ಯದಲ್ಲಿ ೫೦೦ ಪರ್ಸೆಂಟ್

ಇರುವುದು ಏನೂ ಇಲ್ಲವೆಂದರೂ ೮೦೦ ಪರ್ಸೆಂಟ್ ಆಗುವ ಪರಿಸ್ಥಿತಿ ಬರುತ್ತದೆ. ಇದು ನ್ಯಾಯವೇ ಎಂದು ಕೇಳುತ್ತೇನೆ. ಇದನ್ನು ನೋಡಿದರೆ ಇದು ನ್ಯಾಯವಾದುದಲ್ಲ, ಸರಿಯಾದುದಲ್ಲ, ಇದು ಪ್ರಗತಿಗೆ ವಿರೋಧವಾದ ಅಂಶವಾದ್ದರಿಂದ ಇದನ್ನು ವಿರೋಧಿಸಬೇಕಾಗಿದೆ. ಇದು ಪ್ರಗತಿಪರವಾಗಿ ಇದ್ದಿದ್ದರೆ ಪರವಾಗಿರಲಿಲ್ಲ. ಇನ್ನೊಂದು ಅಂಶವನ್ನು ನಾನಾಗಲೇ ಒತ್ತಿ ಒತ್ತಿ ಹೇಳಿದ್ದೇನೆ. ಇದು ಪ್ರತ್ಯಕ್ಷವಾದ ತೆರಿಗೆಯಲ್ಲ, ಪರೋಕ್ಷವಾದ ತೆರಿಗೆ. ಹಾಗೆಯೇ ಎಕ್ಸೈಜ್ ಡ್ಯೂಟಿ ಏನಿದೆಯೋ ಅದೇ ರೀತಿ ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್ ಕೂಡ ಇದೆ. ನಾನು ಸಿನಿಮಾಗೆ ಹೋಗಬೇಕು ಎಂದು ಯೋಚನೆ ಮಾಡಿದರೆ ಮೊದಲೇ ಇದನ್ನು ಸೇರಿಸಿಬಿಟ್ಟಿರುತ್ತಾರೆ. ಈ ರೀತಿ ಪರೋಕ್ಷ ತೆರಿಗೆಗಳ ಅಂಶ ಈಗಾಗಲೇ ೮೦ ಪರ್ಸೆಂಟ್ ಜಾಸ್ತಿಯಾಗಿರಬೇಕಾದರೆ ಪಂಚವಾರ್ಷಿಕ ಯೋಜನೆಗಳಲ್ಲಿ ಯೋಜನೆ ಮಾಡಿದಂತೆ ಆರ್ಥಿಕ ತಜ್ಞರು ಇನ್‌ಡೈರೆಕ್ಟ್ ಟ್ಯಾಕ್ಸ್ ಕಡಿಮೆಯಾಗಬೇಕು, ಡೈರೆಕ್ಟ್ ಟ್ಯಾಕ್ಸನ್ನು ಹೆಚ್ಚು ಹೆಚ್ಚಾಗಿ ಬಂಡವಾಳಗಾರರ ಮೇಲೆ ಶ್ರೀಮಂತರುಗಳ ಮೇಲೆ ಹಾಕಬೇಕು ಎಂದು ಮಾಡಿದ್ದರೂ ಅದಕ್ಕೆ ತದ್ವಿರುದ್ಧವಾಗಿ ಜನಸಾಮಾನ್ಯರ ಮೇಲೆ ಹೊರಿಸುವುದು ನ್ಯಾಯವೇ ? ಇದರಿಂದ ಅವರ ಒಂದು ತತ್ವಕ್ಕೆ ತಿಲಾಂಜಲಿಯನ್ನು ಕೊಟ್ಟ ಹಾಗೆ ಆಗುವುದಿಲ್ಲವೇ ಎಂದು ಕೇಳುತ್ತೇನೆ. ಈ ಇನ್‌ಡೈರೆಕ್ಟ್ ಟ್ಯಾಕ್ಸ್ ಯಾರ ಮೇಲೆ ಬೀಳುತ್ತದೆ ಎಂದರೆ ನಗರಗಳಲ್ಲಿ ಸಿನಿಮಾಕ್ಕೆ ಹೋಗುವ ಜನಗಳ ಮೇಲೆ ಬೀಳುತ್ತದೆ. ಗ್ರಾಮಾಂತರ ಮಟ್ಟದಲ್ಲಿ ಜನರು ೬೦ ಪೈಸೆ, ಒಂದು ರೂಪಾಯಿ ಕೊಡುವುದರಿಂದ ಅವರ ಮೇಲೆ ತೆರಿಗೆಯನ್ನು ಹಾಕಿಲ್ಲ ಎಂದು ಹೇಳಿ ತಪ್ಪಿಸಿಕೊಂಡು ಹೋಗುವಂತ ಕಲ್ಪನೆ ಸರಿಯಲ್ಲ. ಏತಕ್ಕೆಂದರೆ ನಗರವೇ ಆಗಲೀ ಗ್ರಾಮವೇ ಆಗಲೀ ಈ ಎರಡನ್ನೂ ಒಂದೇ ರೀತಿಯಲ್ಲಿ ಯೋಚನೆ ಮಾಡಬೇಕು. ಆ ರೀತಿ ಯೋಚನೆ ಮಾಡಲಾರಿರಿ ಎಂದು ನಾನು ನಂಬುತ್ತೇನೆ. ಸಂಡೂರಿನಲ್ಲಿ ಒಂದು ತರಹ, ಬೆಂಗಳೂರಿನಲ್ಲಿ ಒಂದು ತರಹ ಅದು ಸರಿಯಲ್ಲ. ನನಗೆ ತಿಳಿದಮಟ್ಟಿಗೆ ಮೈಸೂರು ನಗರದಲ್ಲಿ ಸಿನಿಮಾಗೆ ಹೋಗುವ ಹವ್ಯಾಸ ಜನರಿಗೆ ಜಾಸ್ತಿ ಇದೆ. ಅಲ್ಲಿ ನಾಟಕ ಕಂಪನಿಗಳು ಇಲ್ಲವೇ ಇಲ್ಲ, ಎಲ್ಲವನ್ನೂ ಮುಚ್ಚಿಕೊಂಡು ಹೋಗಿದ್ದಾರೆ. ಅವರಿಗೆ ಎಷ್ಟು ಅನುಕೂಲ ಮಾಡಿಕೊಡಬೇಕೋ ಅಷ್ಟು ಅನುಕೂಲವನ್ನು ಮಾಡಿಕೊಡುವುದಕ್ಕೆ ಸಾಧ್ಯವಾಗಿಲ್ಲ. ಸರಕುಗಳು ಅಲ್ಲಿಂದ ಇಲ್ಲಿಗೆ ಬರುತ್ತವೆ. ಮತ್ತೆ ಬೇರೆ ಮನೋರಂಜನಾ ಕಾರ್ಯಕ್ರಮಗಳೂ ಇಲ್ಲ. ಮತ್ತೆ ಸ್ಪೋರ್ಟ್ಸ್ ಆಕ್ಟಿವಿಟೀಸ್ ಕಡಿಮೆ ಇದೆ. ಹೀಗೆ ಇರಬೇಕಾದರೆ ಒಂದೇ ಒಂದು ಮನೋರಂಜನಾ ಸೌಲಭ್ಯ ಎಂದರೆ ಅದು ಸಿನಿಮಾ. ಅದರ ಮೇಲೆ ತೆರಿಗೆಯನ್ನು ಹಾಕಿದರೆ ಅದು ಜನಸಾಮಾನ್ಯರ ಮೇಲೆ ಪರೋಕ್ಷವಾಗಿ ಬೀಳುತ್ತದೆ. ಆದ್ದರಿಂದ ನಾನು ಅದನ್ನು ತೀವ್ರವಾಗಿ ವಿರೋಧ ಮಾಡುತ್ತೇನೆ. ಇದು ೫-೧೦ ಪೈಸೆಯ ಪ್ರಶ್ನೆ ಅಲ್ಲ, ಇದು ಧೋರಣೆಯ ಪ್ರಶ್ನೆ, ದೃಷ್ಟಿಕೋನದ ಪ್ರಶ್ನೆ. ಅಂದಿನಿಂದ ಇಂದಿನವರೆಗೂ ಲೆಕ್ಕಾಚಾರ ಹಾಕಿದರೆ ೫೦೦ ಪರ್ಸೆಂಟ್ ತೆರಿಗೆ ಏನು ಹೆಚ್ಚಾಗಿದೆ ಇದರಲ್ಲಿ ಬೇಕಾದಷ್ಟು ಟ್ಯಾಕ್ಸ್ ಎವೇಷನ್ ಆಗುತ್ತಿದೆ. ಎವೇಷನ್ ಆಗುತ್ತಿರುವುದನ್ನು ತಪ್ಪಿಸುವುದಕ್ಕೆ ಹೊಸದಾಗಿ ಅಮೆಂಡ್‌ಮೆಂಟ್ ತಂದಿದ್ದೀರಿ. ಸಂತೋಷ, ಆ ಬಗ್ಗೆ ನನ್ನ ಭಿನ್ನಾಭಿಪ್ರಾಯವಿಲ್ಲ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಕೊಡಬೇಕಾದಂಥ ತೆರಿಗೆಯನ್ನು ಸರಿಯಾದ ರೀತಿಯಲ್ಲಿ ವಸೂಲು ಮಾಡಬೇಕು ಎಂಬುದರಲ್ಲಿ ಸಂದೇಹವಿಲ್ಲ. ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್ ವಿಷಯದಲ್ಲಿ ಅನ್ಯಾಯಗಳು, ಅಕ್ರಮಗಳು ನಡೆಯುತ್ತಿವೆ. ಕೆಲವು ಸಿನಿಮಾಗಳಿಗೆ ಮನರಂಜನೆ ತೆರಿಗೆ ವಿನಾಯಿತಿ ಮಾಡುತ್ತಾರೆ ಜನ ಆ ಸಿನಿಮಾವನ್ನು ಹೆಚ್ಚಾಗಿ ನೋಡಲಿ ಎಂಬ ಉದ್ದೇಶದಿಂದ ಟ್ಯಾಕ್ಸ್ ಫ್ರೀ ಮಾಡುತ್ತಾರೆ. ಆದರೆ ಎಂತಹ ಚಿತ್ರಗಳಿಗೆ ಟ್ಯಾಕ್ಸ್ ಫ್ರೀ ಮಾಡಿದ್ದೀರಿ ಎಂಬುದು ಮುಖ್ಯವಾದುದು, ಒಳ್ಳೆಯ ಚಿತ್ರಗಳಿಗೆ ಮಾಡಿದರೆ ನಾನು ಒಪ್ಪಿಕೊಳ್ಳುತ್ತೇನೆ. 'ಗರಂ ಹವ' ಎಂದು ಒಂದು ಹಿಂದಿ ಚಿತ್ರ ಬಂದಿತ್ತು. ಹಿಂದೂ-ಮುಸ್ಲಿಂ ಐಕ್ಯತೆ ಬಗ್ಗೆ ಒಂದು ಸಿನಿಮಾ ಬಂದಿತ್ತು, ಅದನ್ನು ನಾನೂ ನೋಡಿದ್ದೇನೆ, ಒಳ್ಳೆಯ ಚಿತ್ರ, ಅದಕ್ಕೆ ಟ್ಯಾಕ್ಸ್ ಫ್ರೀ ಮಾಡಿದ್ದರು. ಅದು ಒಳ್ಳೆಯದು. ಆ ವಿಷಯದಲ್ಲಿ ಭಿನ್ನಾಭಿಪ್ರಾಯವಿಲ್ಲ. ಕೆಲವು ಕೆಟ್ಟ ಚಿತ್ರಗಳೇನಿವೆ ಅವುಗಳಿಗೆ ಅಂತಹ ಚಿತ್ರಗಳಿಗೆ ಟ್ಯಾಕ್ಸ್ ಫ್ರೀ ಮಾಡಿದ್ದಾರೆ.

ಶ್ರೀ ಎಂ. ವೈ. ಘೋರ್ಪಡೆ.—ಚೋಮನದುಡಿ.

ಶ್ರೀ ಎಂ. ಎಸ್. ಕೃಷ್ಣನ್.—ಚೋಮನದುಡಿಗೆ ಮಾಡಿದ್ದೀರಿ ಸರಿ. ಕೆಲವು ಹೊಲಸು ಚಿತ್ರಗಳು ಇರುತ್ತವೆ, ವರ್ಣರಂಜಿತವಾಗಿರುತ್ತವೆ; ಆದರಲ್ಲಿ ಕತ್ತಿಯುದ್ಧ, ಕಾಳಗ, ಅವನು ಇವನಿಗೆ ಹೊಡೆಯುವುದು ಇವನು ಅವನಿಗೆ ಹೊಡೆಯುವುದನ್ನು ತೋರಿಸುತ್ತಾರೆ; ಕೆಲವು ಲವ್ ಸೀನ್‌ಗಳಿರುತ್ತವೆ, ಅಂತಹ ಚಿತ್ರಗಳಿಗೆ ಟ್ಯಾಕ್ಸ್ ಫ್ರೀ ಮಾಡಿದ್ದಾರೆ. ತಾವು (ಘೋರ್ಪಡೆ) ಅರ್ಥಮಂತ್ರಿಗಳಾಗಿರುವುದರಿಂದ, ಜವಾಬ್ದಾರಿ ಸ್ಥಾನದಲ್ಲಿರುವುದರಿಂದ ಸರ್ಕಾರಕ್ಕೆ ಇದರ ಬಗ್ಗೆ ಹೇಳಬೇಕು ಎಂದು ನನ್ನ ಅಭಿಪ್ರಾಯ. ಕೇಂದ್ರ

ಸರ್ಕಾರಕ್ಕೆ ಆಗಲೀ, ಯಾರಿಗೇ ಆಗಲಿ ಸಂಬಂಧಪಟ್ಟವರಿಗೆ ಹೇಳಿ ಸರಿಯಾದಂತ ಚಿತ್ರಗಳಿಗೆ ಸಾಮಾಜಿಕವಾಗಿ ಜನತೆಯ ಪ್ರಶ್ನೆಯನ್ನು ಪ್ರತಿಬಿಂಬಿಸುವಂತಹ ಚಿತ್ರಗಳಿಗೆ, ಜನಗಳಿಗೆ ಸರಿಯಾದ ಮಾರ್ಗದರ್ಶನ ನೀಡುವ ಸಿನಿಮಾಗಳಿಗೆ ತೆರಿಗೆ ವಿನಾಯಿತಿ ಮಾಡಿದರೆ ತೊಂದರೆಯಿಲ್ಲ. ಆದರೆ ಹೊಲಸು ಚಿತ್ರಗಳಿಗೆ ಮನರಂಜನ ತೆರಿಗೆಯಿಂದ ರಿಯಾಯಿತಿ ತೋರಿಸುವುದು ಸರಿಯಾದುದಲ್ಲ. ಕೆಲವು ಕೆಟ್ಟ ಚಿತ್ರಗಳಿಗೆ ಎಗ್ಸಿಬಿಟರ್ಸ್ ದುಡ್ಡು ಕೊಟ್ಟು ಟ್ಯಾಕ್ಸ್ ಫ್ರೀ ಮಾಡಿಸಿಕೊಳ್ಳುತ್ತಾರೆ. ಶಾಕಾಯ ಲವಣಾಯ ಮಾಡಿ ಟ್ಯಾಕ್ಸ್ ಫ್ರೀ ಮಾಡಿಸಿಕೊಳ್ಳುತ್ತಾರೆ. ಸಿನಿಮಾ ಜಾಸ್ತಿ ದಿವಸ ರನ್ ಆದಷ್ಟೂ ಎಗ್ಸಿಬಿಟರ್ಸ್‌ಗೆ ಜಾಸ್ತಿ ಹಣ ಬರುತ್ತದೆ. ಡಿಸ್ಟ್ರಿಬ್ಯೂಟರ್‌ಗೆ ಮೊದಲೇ ದುಡ್ಡು ಬಂದಿರುತ್ತದೆ. ಹೀಗಾಗಿ ಕೆಲವು ಕೆಟ್ಟ ಚಿತ್ರಗಳಿಗೂ ಮನರಂಜನೆ ತೆರಿಗೆ ವಿನಾಯಿತಿ ಮಾಡಿಸಿಕೊಂಡು ದುಡ್ಡು ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಾರೆ. ಒಳ್ಳೆ ಸಿನಿಮಾಗಳು ಬಂದರೆ ಒಂದು ವಾರವೂ ನಡೆಯುವುದಿಲ್ಲ. ನಾನು ಆಗಲೇ ಹೇಳಿದ 'ಗರಂ ಹವಾ' ಚಿತ್ರ ೧೦ ದಿವಸ ಮಾತ್ರ ನಡೆಯಿತು. ಆ ಸಿನಿಮಾ ಬಗ್ಗೆ ಚಿತ್ರ ವಿಮರ್ಶೆ ಕೂಡ ಪತ್ರಿಕೆಗಳಲ್ಲಿ ಬಂದಿತ್ತು. ಆದ್ದರಿಂದ ತಾವು ಈ ಬಗ್ಗೆ ನೋಡಬೇಕು. ಕೆಟ್ಟ ಚಿತ್ರಗಳಿಗೆ ಟ್ಯಾಕ್ಸ್ ಫ್ರೀ ಮಾಡಿ ಅನುಕೂಲ ಮಾಡಿಕೊಟ್ಟು ಕೆಲವೇ ಜನ ದುಡ್ಡು ಮಾಡಿಕೊಳ್ಳುವುದಕ್ಕೆ ಅವಕಾಶವಾಗುವಂತೆ ಮಾಡಕೂಡದು. ಇದನ್ನು ಗಮನದಲ್ಲಿಟ್ಟುಕೊಳ್ಳಬೇಕು ಎಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ. ಕಾಂಪ್ಲಿಮೆಂಟರಿ ಪಾಸ್ ಇರುವುದಿಲ್ಲ ಏನೂ ಇರುವುದಿಲ್ಲ. ಹಾಗೆಯೇ ಸಿನಿಮಾ ನೋಡಿಕೊಂಡು ಹೋಗುವುದೂ ನಡೆಯುತ್ತಿದೆ ಎಂದು ಕೇಳಿದ್ದೇನೆ. ಆ ದುಡ್ಡನ್ನು ಕಲೆಕ್ಟ್ ಮಾಡಿ ಎಲ್ಲೆಲ್ಲಿ ಹೋಗಬೇಕೋ ಅಲ್ಲಿಗೆ ಹೋಗಿ ಹಂಚಿಕೊಳ್ಳುತ್ತಾರೆ ಎಂದು ಕೇಳಿದ್ದೇನೆ. ಇದರ ಬಗ್ಗೆ ಹುಷಾರಾಗಿರಬೇಕು ಎಂದು ಹೇಳುತ್ತೇನೆ. ಇನ್ನೊಂದು ವಿಚಾರ ಮೂರನೆಯದು; ಕೆಳಗಿನ ದರ್ಜೆ ಟಿಕೆಟ್ ಪಡೆದು ಮೇಲ್ದರ್ಜೆ ಸೀಟಿನಲ್ಲಿ ಕುಳಿತುಕೊಂಡು ಸಿನಿಮಾ ನೋಡಿ ಆದರಿಂದ ಸ್ವಲ್ಪ ಮಟ್ಟಿನ ಟ್ಯಾಕ್ಸ್ ಎವೇಷನ್ ನಡೆಯುತ್ತಿದೆ ಎಂದು ನನಗೆ ತಿಳಿದುಬಂದಿದೆ. ಇದನ್ನು ತಪ್ಪಿಸಬೇಕು ಎಂದು ಕೇಳಿಕೊಳ್ಳುತ್ತೇನೆ. ಇನ್ನೊಂದು ಅಂಶ ಮಾನ್ಯ ಟಿ. ಆರ್ ಶಾಮಣ್ಣನವರು ಹೇಳಿದ ಹಾಗೆ ಬ್ಲಾಕ್ ಮಾರ್ಕೆಟ್‌ಗಳು ಸಿನಿಮಾ ಮಂದಿರಗಳಲ್ಲಿ ನಡೆಯುತ್ತಿದೆ. ಇದು ಸರ್ವೇಸಾಧಾರಣವಾಗಿದೆ. ಒಳಗಡೆ ಟಿಕೆಟ್ ಸಿಗುವುದಿಲ್ಲ, ಹೊರಗಡೆ ಬಂದು ಎರಡು-ಮೂರು ರೂಪಾಯಿ ಜಾಸ್ತಿ ಕೊಟ್ಟರೆ ಟಿಕೆಟ್ ಸಿಗುತ್ತದೆ. ಇದಕ್ಕೆ ಪೋಲಿಸಿನವರೂ ಕೂಡ ಶಾಮಿಲಾಗಿರುತ್ತಾರೆ, ಮತ್ತು ಕೆಲವು ಥಿಯೇಟರ್ ಮಾಲೀಕರೂ ಕೂಡ ಜವಾಬ್ದಾರಿಯಾಗಿರುತ್ತಾರೇನೋ ಎಂಬ ಅನುಮಾನ ನನಗಿದೆ. ಒಳಗಡೆ ಟಿಕೆಟ್ ಮಾರಿದರೆ ಟ್ಯಾಕ್ಸ್ ಕೊಡಬೇಕಾಗುತ್ತದೆ ಎಂದು ಬೇರೆ ಟಿಕೆಟ್‌ಗಳನ್ನು ಹೊರಗಡೆ ಮಾರುವುದಕ್ಕೆ ಅರೇಂಜ್‌ಮೆಂಟು ಮಾಡಿಕೊಂಡು ದುಡ್ಡು ಮಾಡಿಕೊಳ್ಳುತ್ತಿದ್ದಾರೇನೋ ಎಂದು ಅನುಮಾನವಾಗಿದೆ. ಆ ರೀತಿ ಮಾಡಿದರೆ ಬಿಗಿಯಾದ ಕ್ರಮ ತೆಗೆದುಕೊಳ್ಳಬೇಕು. ಪೋಲೀಸಿನವರು ಇದರ ಬಗ್ಗೆ ಸರಿಯಾದ ಬಂದೋಬಸ್ತು ಮಾಡುತ್ತಿಲ್ಲ. ಆದ್ದರಿಂದ ತಾವು ಆ ಬಗ್ಗೆ ಗಮನ ಕೊಡಬೇಕು. ಎಗ್ಸಿಬಿಟರ್ಸ್ ಮ್ಯಾನೇಜರ್ಸ್ ಮತ್ತಿತರರು ಯಾರು ಈ ಹವ್ಯಾಸದಲ್ಲಿ ತೊಡಗಿರುತ್ತಾರೆ ಅಂತಹವರ ಮೇಲೆ ತೀವ್ರವಾದ ಕ್ರಮ ತೆಗೆದುಕೊಳ್ಳಬೇಕಾಗಿದೆ. ಈ ಬ್ಲಾಕ್ ಮಾರ್ಕೆಟ್ ನಡೆಯದ ಹಾಗೆ ನೋಡಿಕೊಳ್ಳುವ ಜವಾಬ್ದಾರಿ ಸರ್ಕಾರದ ಮೇಲಿದೆ. ಎಲ್ಲಿಯವರೆಗೆ ಸಿನಿಮಾ ಮಂದಿರಗಳು ಖಾಸಗಿಯವರ ಕೈಯಲ್ಲಿರುತ್ತದೆಯೋ ಅಲ್ಲಿಯವರೆಗೆ ಇವೆಲ್ಲಾ ಏನೂ ಮಾಡುವುದಕ್ಕಾಗುವುದಿಲ್ಲ. ಇದನ್ನು ರಾಷ್ಟ್ರೀಕರಣ ಮಾಡಲೇಬೇಕು. ಅದರಿಂದ ವರಮಾನವೂ ಜಾಸ್ತಿಯಾಗುತ್ತದೆ, ತೊಂದರೆಯೂ ತಪ್ಪುತ್ತದೆ. ಆದ್ದರಿಂದ ಸರ್ಕಾರವೇ ಚಿತ್ರಮಂದಿರಗಳನ್ನು ನಡೆಸಬೇಕು ಎಂದು ನನ್ನ ಸ್ಪಷ್ಟವಾದ ಅಭಿಪ್ರಾಯವಾಗಿದೆ.

ಶ್ರೀ ಕೆ. ಎಂ. ನಾಗಣ್ಣ.—ನೀವೇ ಕುಳಿತುಕೊಂಡು ನೋಡಬೇಕು.

ಶ್ರೀ ಎಂ. ಎಸ್. ಕೃಷ್ಣನ್.—ಜನ ನೋಡುತ್ತಾರೆ. ನಾಗಣ್ಣನವರ ಬಗ್ಗೆ ನನಗೆ ಗೌರವವಿದೆ. ಅವರದೂ ಒಂದು ಥಿಯೇಟರ್ ಇದೆ. ನ್ಯಾಷನಲೈಸ್ ಮಾಡಿರುವ ಚಿತ್ರಮಂದಿರಗಳಲ್ಲಿ ಜನ ಹೋಗುತ್ತಿಲ್ಲವೇ, ಥಿಯೇಟರ್‌ಗಳು ಚೆನ್ನಾಗಿಲ್ಲವೇ ? ಮಾಸ್ಕೋದಲ್ಲಿ ಒಳ್ಳೆಯ ಥಿಯೇಟರ್‌ಗಳು ಇವೆ, ಒಳ್ಳೆಯ ಚಿತ್ರಗಳನ್ನು ಪ್ರೊಡ್ಯೂಸ್ ಮಾಡುವವರೂ ಇದ್ದಾರೆ, ಮಾಸ್ಕೋ ಫಿಲಂ ಕಂಪನಿ ತರಹ ಇಂಡಿಯಾ ಫಿಲಂ ಕಂಪನಿ ಮಾಡಿ, ಒಳ್ಳೆಯ ಚಿತ್ರಗಳನ್ನು ಪ್ರೊಡ್ಯೂಸ್ ಮಾಡಿ. ಅದರಲ್ಲಿ ತಪ್ಪೇನೂ ಇಲ್ಲ. ಪ್ರೊಡ್ಯೂಸರ್ಸ್‌ಗೆ ಮತ್ತು ಡೈರೆಕ್ಟರ್‌ಗಳಿಗೆ ಸರಿಯಾದಂತಹ ಸಂಬಳ ನಿಷ್ಕರ್ಷೆ ಮಾಡಿ ಅವರಿಗೆ ಒಳ್ಳೆಯ ಸ್ಥಾನವನ್ನು ಕೊಟ್ಟು ಅವರಿಗೆ ಉತ್ತೇಜನ ಕೊಟ್ಟರೆ ತಪ್ಪೇನೂ ಇಲ್ಲ. ಸರ್ಕಾರವೇ ಬಂಡವಾಳ ಹಾಕಿ ಮಾಡಿದರೆ ಏನು ತಪ್ಪು ? ಅದರಿಂದ ಹಣವೂ ಬರುತ್ತದೆ, ಒಳ್ಳೆಯ ಚಿತ್ರಗಳನ್ನು ತೆಗೆಯಬಹುದು,

ನಿಮ್ಮ ಕಂಟ್ರೋಲ್ ಇರುತ್ತದೆ, ಸಾಮಾಜಿಕ ದೃಷ್ಟಿಕೋನಕ್ಕೆ ಅನುಗುಣವಾಗಿ ಸಿನಿಮಾ ತಯಾರು ಮಾಡ ಬಹುದು. ಕೆಟ್ಟಕೆಟ್ಟ ಚಿತ್ರಗಳು ತಯಾರಾಗುವುದು ತಪ್ಪುತ್ತದೆ. ಆ ದೃಷ್ಟಿಯಿಂದ ನೀವು ಈ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳಬೇಕಾಗಿತ್ತು, ಅದರ ಕಡೆ ಗಮನ ಕೊಡುತ್ತಿಲ್ಲ. ಸಿನಿಮಾ ನೋಡುವಂತಹ ಜನಸಾಮಾನ್ಯರ ಮೇಲೆ ತೆರಿಗೆ ಹೊರಿಸುವುದು ಅಕ್ಷಮ್ಯ ಅಪರಾಧ ಎಂದು ಹೇಳಿ, ಆ ಆಧಾರದ ಮೇಲೆ ಈ ಬಿಲ್ಲನ್ನು ವಿರೋಧಿಸುತ್ತೇನೆ.

[*Mr. Deputy Speaker in the Chair*]

ಬೇರೆ ಅಂಶಗಳ ಬಗ್ಗೆ ನಾನೂ ಅಷ್ಟಾಗಿ ವಿವರವಾಗಿ ಹೇಳುವುದಕ್ಕೆ ಹೋಗುವುದಿಲ್ಲ; ಅದರ ಬಗ್ಗೆ ಒಳ್ಳೆಯದೆಂದು ನನ್ನ ಅಭಿಪ್ರಾಯ. ಮುಖ್ಯವಾಗಿ ೬ಬಿ (೨)ನಲ್ಲಿ ಅಮೆಂಡ್‌ಮೆಂಟ್ ಮಾಡಿ ಒಪ್ಪಿಕೊಳ್ಳು ವುದಕ್ಕೆ ತಯಾರಾಗಿದ್ದಾರೆ ಇನ್ನೂ ಒಂದು ಅಂಶ ನನಗೆ ಕಂಡು ಬರುವುದು ಏನು ಎಂದರೆ, ಕ್ಲಾಸ್ ೭ (೨)ರಲ್ಲಿ ಮನರಂಜನೆ ತೆರಿಗೆ ವಿನಾಯಿತಿ ತೋರಿಸಿದ್ದಾರೆ, ಇದರ ಬಗ್ಗೆ ಯಾವುದು ಭಿನ್ನಾಭಿಪ್ರಾಯ ಇಲ್ಲ. ಇದರಲ್ಲಿಯೂ ಕೆಲವು ಸಂದರ್ಭದಲ್ಲಿ ದುರುಪಯೋಗವಾಗತಕ್ಕ ಪ್ರವೃತ್ತಿ ಕಂಡುಬರುತ್ತದೆ. ಕ್ಲಾಸ್ ನಂಬರ್ (೨)ರಲ್ಲಿ ಬದಲಾಯಿಸುವುದಕ್ಕೆ ಅವಕಾಶ ಇದೆ; ಇದರ ಬಗ್ಗೆ ಒಂದೇ ಮಾತಿನಲ್ಲಿ ಹೇಳಬಹುದಾ ಗಿತ್ತು. ಇನ್ನೂ ಕ್ಲಾಸ್ ೭ (ಸಿ)ನಲ್ಲಿ ನನಗೆ ತಿಳಿದಿರುವುದು ದುರುಪಯೋಗವಾಗುತ್ತದೆಂದು. ಪಾಶ್ಚಿ ಮಾತ್ಯ ದೇಶಗಳಿಂದ ಒಳ್ಳೆ ಒಳ್ಳೆಯ ಸಿನಿಮಾಗಳನ್ನು ತರಿಸಿ ತೋರಿಸುತ್ತಿದ್ದಾರೆ. ಎಗ್ಸಿಬ್ಯೂಟ್ ಮಾಡು ವುದರಲ್ಲಿ ತಪ್ಪು ಏನೂ ಇಲ್ಲ, ಕ್ಲಬ ನಲ್ಲಿ ಮೆಂಬರ್‌ಶಿಪ್ ಕೊಡುವುದಕ್ಕೆ ದುಬಾರಿ ಹಣ ವಸೂಲು ಮಾಡು ತ್ತಾರೆ. ಇದರಿಂದ ಶ್ರೀಮಂತವರ್ಗ ಮಾತ್ರ ನೋಡುತ್ತದೆಯೋ ಹೊರತು, ಸಾಮಾನ್ಯ ಜನ ನೋಡುವು ದಕ್ಕೆ ಆಗುವುದಿಲ್ಲ, ಇಂಥವರಿಗೆ ಎಕ್ಸೆಂಪ್ಷನ್ ಕೊಡುವುದು ಸರಿಯೇ ? ಒಂದು ಪಕ್ಷ ರಿಯಾಯಿತಿ ಕೊಟ್ಟರೂ ಸಹ ಸಾಮಾನ್ಯ ಜನರೂ ಮೆಂಬರ್‌ಗಳು ಆಗುವುದಕ್ಕೆ ಅವಕಾಶ ಮಾಡಿಕೊಡಬೇಕು ಇನ್ನೂ ಎರಡನೆಯದಾಗಿ ಫಿಲಂಕ್ಲಬ್‌ಗಳು ಪಾಶ್ಚಿಮಾತ್ರ ದೇಶಗಳಿಂದ ಹೆಚ್ಚು ಹೆಚ್ಚು ಸಿನಿಮಾಗಳನ್ನು ತರಿಸಿ ತೋರಿಸುವುದಕ್ಕೆ ಅಡ್ಡಿ ಆತಂಕ ಇರಕೂಡದು ಎಂದು ಇದೆ ನಾನು ಕೂಡ ಬಂಡವಾಳ ರಾಷ್ಟ್ರಗಳಾದ ನಾರ್ವೆ, ಸ್ವೀಡನ್ ಡೆನ್ಮಾರ್ಕ್ ರಾಜ್ಯಗಳಲ್ಲಿ ಸಿನಿಮಾಗಳನ್ನು ನೋಡಿದ್ದೇನೆ. ಇವುಗಳನ್ನು ಬ್ಲೂ ಫಿಲಂ ಎಂದು ಕರೆಯುತ್ತಾರೆ, ಇವುಗಳು ತುಂಬಾ ಅಭಾಸವಾಗಿರುತ್ತವೆ. ಅವುಗಳನ್ನು ನಾವು ನೋಡಿದರೆ ಮೈಯೆಲ್ಲಾ ಉರಿಯುತ್ತದೆ ಇಂಥ ಸಿನಿಮಾಗಳನ್ನು ಸಾವಿರಾರು ರೂಪಾಯಿ ಖರ್ಚುಮಾಡಿ ತೆಗೆಯು ತ್ತಾರೆ, ಸಾವಿರಾರು ಜನ ನೋಡುತ್ತಾರೆ. ಇದನ್ನು ಇಲ್ಲಿ ತೋರಿಸುವುದಕ್ಕೆ ೧೦೦-೨೦೦-೫೦೦ ರೂಪಾ ಯಿಗಳನ್ನು ವಸೂಲು ಮಾಡುತ್ತಾರೆಂದು ನನಗೆ ತಿಳಿದುಬಂದಿದೆ. ಇದು ದೊಡ್ಡ ದೊಡ್ಡ ನಗರಗಳಲ್ಲಿ ಇದೆ ಎಂದು ಕೇಳಿದ್ದೇನೆ, ತಮ್ಮ ಸಿ. ಓ. ಡಿ. ಮತ್ತು ಸಿ ಐ. ಡಿ. ಗಳನ್ನು ಬಿಟ್ಟು ಕಂಡುಹಿಡಿಯಬಹುದು ಅಂತಹವರಿಗೆ ಬಲಿಹಾಕಿ, ಸರಿಯಾದ ಸಿನಿಮಾಗಳನ್ನು, ಕೆಟ್ಟ ಹವ್ಯಾಸಗಳು ಬೆಳೆಸುವುದಕ್ಕೆ ಅವಕಾ ಕೊಡದೇ ಇಂತಹ ಸಿನಿಮಾಗಳನ್ನು ತರುವುದಕ್ಕೆ ಅವಕಾಶ ಮಾಡಿಕೊಡಬೇಕು, ಅಲ್ಲದೆ ಇದರಲ್ಲಿ ದುರುಪ ಯೋಗವಾಗದಹಾಗೆ ನೋಡಿಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳಿ, ನಾನು ಹಿಂದೆ ಹೇಳಿದಹಾಗೆ ಇದರಲ್ಲಿ ಸಾಮಾನ್ಯ ಜನರಿಗೆ ಪರೋಕ್ಷವಾಗಿ ತೆರಿಗೆ ಹಾಕುವುದನ್ನು ವಿರೋಧಿಸಿ, ಇಷ್ಟುಮಾತುಗಳನು ಆಡುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನಮಾತನ್ನು ಮುಗಿಸುತ್ತೇನೆ.

† ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ) —ಸನ್ಮಾನ್ಯ ಅಧ್ಯಕ್ಷರೇ, ಈಗ ಮಾತನಾಡಿದ ನನಗಿಂತ ಹಿರಿಯರಾದ ಶ್ರೀಮಾನ್ ಕೃಷ್ಣನ್‌ರವರ ವಾದವನ್ನು ಸಮರ್ಥಿಸುತ್ತಾ, ಎರಡು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಅರ್ಥಸಚಿವರು ಮಂಡಿಸಿದತಕ್ಕಂಥ ಮನರಂಜನೆ ತೆರಿಗೆ ವಿಧೇ ಯಕ ಏನು ಇದೆ ಇದನ್ನು ನಾನು ಸಂಪೂರ್ಣವಾಗಿ ವಿರೋಧಿಸುವುದಕ್ಕೆ ಅಪೇಕ್ಷೆಪಡುತ್ತೇನೆ. ಶ್ರೀಮಾನ್ ಕೃಷ್ಣನ್‌ರವರು ಬಹಳ ಚನ್ನಾಗಿ ಮನದಟ್ಟಾಗುವ ಹಾಗೆ ಹೇಳಿದ್ದಾರೆ. ಆದರೆ ಅದನ್ನು ಬರೀ ಹೆಲ್ಮೆಟ್ ಎಂದು ಹೇಳುವುದಾದರೆ ಏನೂ ಹೇಳುವುದಕ್ಕೂ ಆಗುವುದಿಲ್ಲ. ಇವತ್ತು ಹಳ್ಳಿ ಮತ್ತು ಪಟ್ಟಣಗಳಲ್ಲಿರತಕ್ಕ ಬಡವರು ಏನೂ ಇದ್ದಾರೆ ಅವರ ಮೇಲೆ ಸಾಮಾನ್ಯ ಜನರ ಮೇಲೆಪರೋಕ್ಷವಾಗಿ ತೆರಿಗೆ ಹಾಕತಕ್ಕದು ಏನು ಇದೆ ಇದು ಮನಸ್ಸಿಗೆ ತುಂಬಾ ಬಾಧೆಯನ್ನುಂಟು ಮಾಡತಕ್ಕ ವಿಷಯ, ಇವತ್ತು ಒಂದುಕಡೆ ಜನಸಾಮಾನ್ಯರ ಉದ್ಧಾರ ಮತ್ತು ಗರೀಭಿಹಠಾವೋ ಎಂದು ಹೇಳುತ್ತಿದ್ದೀರಿ. ಕೃಷ್ಣನ್‌ರವರು ಹೇಳಿದ ಹಾಗೆ ಹಳ್ಳಿ ಮತ್ತು ಪೇಟೆಗಳಲ್ಲಿ ವಾಸ ಮಾಡುವ ಬಡ ಜನರಮೇಲೆ ಸಿನಿಮಾಗಳಿಗೆ ಹೋಗುವವರ ಮೇಲೆ ಟ್ಯಾಕ್ಸ್ ಹಾಕಿ ಅವರು ಎಲ್ಲಿಗೂ ಹೋಗದಹಾಗೆ ಮಾಡುತ್ತಿದ್ದೀರಿ. ಗ್ರಾಮಾಂತರ ಪ್ರದೇಶಗಳಲ್ಲಿ ಸಿನಿಮಾಗಳೂ ಇಲ್ಲ, ಟೂರಿಂಗ್‌ಟಾಕೀಸ್‌ಗಳು ಇಲ್ಲ. ಒಂದು ವರ್ಷದಲ್ಲಿ ಅಪರೂಪಕ್ಕೆ ಮೂರು ತಿಂಗಳು

ಬರುತ್ತವೆ, ಅದರಲ್ಲಿಯೂ ನಮ್ಮ ಕಡೆ ಮಳೆಗಾಲದಲ್ಲಿ ಒಂದು ಟೂರಿಂಗ್ ಟಾಕೀಸ್‌ಗಳೂ ನಡೆಯುವುದಿಲ್ಲ. ಒಂದು ಪಕ್ಷ ಬಂದರೂ ನಿಮ್ಮ ಜಿಲ್ಲಾಧಿಕಾರಿಗಳು ಇತರೇ ಅನೇಕ ತೊಂದರೆಗಳು ಇವೆ, ಅವು ಏನೇ ಇರಲಿ. ಹಳ್ಳಿಗಳಲ್ಲಿ ಪರಂಪರೆಯಾಗಿ ನಡೆದುಬಂದಂತ ಯಕ್ಷಗಾನ, ಬಯಲಾಟ ಇತರೆ ಸಣ್ಣ ನಾಟಕಗಳನ್ನು ಊರಿನಲ್ಲಿರತಕ್ಕ ಯುವಕರು ಶಾಲೆಗಳನ್ನು ಅಥವಾ ಹಾಸ್ಟೆಲುಗಳನ್ನು ಕಟ್ಟುವುದಕ್ಕೆ ಸಹಾಯಕೋಸ್ಕರ ಆಡಿ ಹಣ ಕಲೆಕ್ಟ ಮಾಡುತ್ತಿದ್ದರು. ಹಳ್ಳಿಗಳಲ್ಲಿರತಕ್ಕ ಜನರಿಗೆ ಸಾಮಾನ್ಯವಾಗಿ ಕಲಾಭಿರುಚಿಯನ್ನು ವ್ಯಕ್ತಪಡಿಸುವುದಕ್ಕೆ ಒಳ್ಳೆಯ ಕೆಲಸಕ್ಕಾಗಿ ಸಹಾಯ ಮಾಡುವುದಕ್ಕೆ ಅವರಮೇಲೆ ಟ್ಯಾಕ್ಸ್ ಹಾಕುವುದರ ಮೂಲಕ ಕಲಾಭಿರುಚಿಯನ್ನು ಕೊಲೆ ಮಾಡುತ್ತಿದ್ದೀರಿ ಎಂದರೆ ಉತ್ಪ್ರೇಕ್ಷೆಯಾಗಲಾರದು. ಮಾನ್ಯ ಅಧ್ಯಕ್ಷರೇ "ಸಂತೋಷಕ್ಕೂ ಸುಂಕ'' ಹಾಕುವ ಸರ್ಕಾರ ಅಧಿಕಾರದಲ್ಲಿರುವುದು ಯೋಗ್ಯವೇ ? ನನಗೆ ತಿಳಿದಿರುವ ಹಾಗೆ ಸುಂಕ ಇಲ್ಲದೇ ಬಡವರು ಹೋಗಿ ನೋಡತಕ್ಕ ಒಂದು ಸಣ್ಣ ಸಿನಿಮಾಮಂದಿರ ಪ್ರಧಾನಿಮಂತ್ರಿಯವರ ಮನೆಯಲ್ಲಿದೆಯಂತೆ, ಅಲ್ಲಿ ಟ್ಯಾಕ್ಸ್ ಹಾಕಿದ್ದಾರೋ ಇಲ್ಲವೋ ಗೊತ್ತಿಲ್ಲ. ಬಡವರ ಮನೆಯಲ್ಲಿ ಅಂದರೆ ಮಂತ್ರಿಗಳ ಮನೆಯಲ್ಲಿ ಟೆಲಿವಿಷನ್ ಸೆಟ್ಸ್ ಇದ್ದದನ್ನು ನೋಡಿದ್ದೇವೆ. ಹಳ್ಳಿಗಳಲ್ಲಿರತಕ್ಕ ಜನ ಪಟ್ಟಣಗಳಲ್ಲಿರತಕ್ಕ ಬಡವರಮೇಲೆ ಮನರಂಜನೆ ತೆರಿಗೆ ಹಾಕತಕ್ಕ ಕ್ರಮ ಏನು ಇದೆ. ಇದನ್ನು ತಾವು ವಿಚಾರಮಾಡಬೇಕು. ಸ್ವಲ್ಪ ಮುಂಚೆ ಉತ್ತರ ಕೊಡುವಾಗಿ ವಿದ್ಯಾಭ್ಯಾಸ ಮತ್ತು ಆರೋಗ್ಯಕ್ಕೆ ಸಂಬಂಧಪಟ್ಟ ಸೆಸ್‌ಗಳು ನೇರವಾಗಿ ಅದಕೋಸ್ಕರವೇ ಹೋಗುತ್ತದೆ ಇದರಿಂದ ೧೧ ಕೋಟಿ ರೂಪಾಯಿ ಬರುತ್ತದೆಂದು ಹೇಳಿದಿರಿ. ಮನರಂಜನೆ ತೆರಿಗೆಯಿಂದ ಬರತಕ್ಕ ಒಂದೂವರೆ ಕೋಟಿ ರೂಪಾಯಿಗಳನ್ನು ಯಾವ ಉದ್ದೇಶಕೋಸ್ಕರ ಬಳಸುತ್ತೀರಿ ಎನ್ನುವುದನ್ನು ತಾವು ವಿಚಾರ ಮಾಡಿ ಹೇಳಬೇಕು.

ಇವತ್ತು ಎಲ್ಲಿಗೆ ಬಂದಿದೆ ಎಂದರೆ ಹಳ್ಳಿಗಳಲ್ಲಿ ಸಿನೆಮಾ ಇಲ್ಲ, ಅದಕ್ಕೆ ಬದಲಾಗಿ ಕೋಳಿ ಆಟ, ಯಕ್ಷಗಾನ, ಬಯಲಾಟ ಮುಂತಾದ ಆಟಗಳನ್ನು ಆಡುತ್ತಾರೆ: ಜೊತೆಗೆ ನಾಟಕಗಳನ್ನು ಆಡುತ್ತಾರೆ. ಉದಾಹಣೆಗೆ ಯಕ್ಷಗಾನ, ಬಯಲಾಟಗಳನ್ನು ತೆಗೆದುಕೊಂಡರೆ ಅವರು ಟಿಕೆಟ್ ಮಾಡಿಸಿ ಮಾರಾಟ ಮಾಡಬೇಕಾದರೆ ಟ್ಯಾಕ್ಸ್ ಕೊಡಬೇಕಾಗುತ್ತದೆ. ಆ ಬಗ್ಗೆ ತಾವು ವಿಚಾರ ಮಾಡಬೇಕೆಂದು ಹೇಳಬಯಸುತ್ತೇನೆ ಮಾನ್ಯ ಶಾಮಣ್ಣನವರು ಮಾತನಾಡುತ್ತಾ ಮನರಂಜನೆಯ ಮೇಲೆ ಆದಷ್ಟು ಚನ್ನಾಗಿ ಟ್ಯಾಕ್ಸ್ ಹಾಕಲಿ ಎಂದು ಹೇಳಿದರು. ಆದರೆ ನಾನು ಆವರಿಗೆ ಅಗಲೇ ಮಾತನಾಡುವಾಗ ಹೇಳಿದೆ. ಏಕೆಂದರೆ ಅವರಿಗೆ ರಂಗಸ್ವಾಮಿ ಎಂಬ ಒಬ್ಬ ಸುಪುತ್ರರು ಇದ್ದಾರೆ. ಅವರಿಗೆ ನಾಟಕ ಮತ್ತು ಸಿನಿಮಾಗಳಲ್ಲಿ ಬಹಳ ಆಸಕ್ತಿ ಇದೆ; ಮತ್ತು ಒಳ್ಳೆಯ ಅಭಿನಯವು ಇದೆ. ಅವರು ನನ್ನ ಸ್ನೇಹಿತರೂ ಹೌದು. ಮಾನ್ಯ ಶಾಮಣ್ಣನವರ ಪುತ್ರ ಆ ಕಡೆ ಹೋಗುತ್ತಾನೆಂದು ಪುತ್ರ ಪ್ರೇಮದ ಸಿಟ್ಟಿನಿಂದ. ಮನರಂಜನೆ ಮೇಲೆ ಹೆಚ್ಚು ಟ್ಯಾಕ್ಸ್ ಹಾಕಿ ಎಂದು ಹೇಳಿದ್ದಾರೆ. ಅದು ಏನೇ ಇರಲಿ. ಮಾನ್ಯ ಅಧ್ಯಕ್ಷರೇ, ಈ ಮನರಂಜನೆಯ ಬಗ್ಗೆ ಟ್ಯಾಕ್ಸ್ ಹಾಕುವ ಬದಲು ಮಾನ್ಯ ಕೃಷ್ಣನ್‌ರವರು ಹೇಳಿದ ವಿಚಾರವನ್ನು ಸಮರ್ಥನೆ ಮಾಡುವುದಕ್ಕೆ ಅಪೇಕ್ಷೆಪಡುತ್ತೇನೆ. ಚಲನಚಿತ್ರ ಮಂದಿರಗಳನ್ನು ಸರ್ಕಾರ ವಶಪಡಿಸಿಕೊಂಡರೆ ಹೆಚ್ಚು ಪ್ರಯೋಜನವಾಗುತ್ತದೆ. ಆದರೆ ಅವುಗಳನ್ನು ವಶಪಡಿಸಿಕೊಳ್ಳುವುದಕ್ಕೆ ಸರ್ಕಾರಕ್ಕೆ ತಾಕತ್ತು ಇದೆಯೋ ಎಂದು ಕೇಳುತ್ತೇನೆ ಏಕೆಂದರೆ ವಶಪಡಿಸಿಕೊಂಡ ಮೇಲೆ, ಕೆ.ಎಸ್.ಆರ್.ಟಿ.ಸಿ ಯ 800 ಬಸ್ಸುಗಳಂತೆ ಅಂದರೆ 800 ಖಾಸಗೀ ಬಸ್ಸುಗಳನ್ನು ವಶಪಡಿಸಿಕೊಂಡಿರುವ ರೀತಿ ಆಗಬಾರದು. ಆ ಬಸ್ಸುಗಳು ಖಾಸಗಿಯವರ ಕೈಯಲ್ಲಿ ಇದ್ದಾಗ ಅವುಗಳ ಮೆಯಿಂಟೆನೆನ್ಸ್ ಹೇಗೆ ಇತ್ತು ಮತ್ತು ಈಗ ಹೇಗೆ ಇದೆ ಎಂದು ಕೇಳುತ್ತೇನೆ. ನೀವು ಹೊಸದಾಗಿ ನ್ಯಾಶನಲೈಸೆ ಮಾಡುವ ನ್ಯಾಶನಲಿಸ್ಟ್ ಆದರೆ ನಾವು ದಶಕಗಳಿಂದ ನ್ಯಾಶನಲೈಸೆ ಆಗಬೇಕೆಂದು ಹೋರಾಟ ಮಾಡಿ ಜೈಲಿಗೆ ಹೋಗಿ ಬಂದಿದ್ದೇನೆ. ಈಗ ಅವುಗಳ ಮೆಯಿಂಟೆನೆನ್ಸ್ ಹೇಗಿದೆ ಎಂಬುದಕ್ಕೆ ಒಂದು ಉದಾಹರಣೆ ಹೇಳುವುದಾದರೆ ಸ್ವಲ್ಪ ದಿನಗಳ ಹಿಂದೆ ಶಿವಮೊಗ್ಗದಿಂದ ಬರುವಾಗ ಸರ್ಕಾರ ವಶಪಡಿಸಿಕೊಂಡಿರುವ ಹಿಂದಿನ ಖಾಸಗಿ ಬಸ್ಸಿನಲ್ಲಿ ಬಂದೆ.

(Quorum was farmed after one miunte)

ಶ್ರೀ ಎಂ.ಎಸ್ ಕೃಷ್ಣನ್.—ಮಾನ್ಯ ಉಪಸಭಾಧ್ಯಕ್ಷರೇ, ಬಜೆಟ ಅಧಿವೇಶನ ಶುರುವಾದ ಮೇಲೆ ಇವತ್ತಿನವರೆಗೆ ಕೋರಂ ಜೋತಾ ಆಗಿರುವುದು 5ನೇ ಬಾರಿ ಎಂದು ಕಾಣುತ್ತದೆ ತಾವು ದಯವಿಟ್ಟು ಇದರ ಬಗ್ಗೆ ನಮಗೆಲ್ಲ ಬುದ್ಧಿವಾದ ಹೇಳಬೇಕೆಂದು ಕಾಣುತ್ತದೆ.

MR. DEPUTY SPEAKER.—It is a matter o introspection. That is all I can say.

ಶ್ರೀ ಕೊಣಂದೂರು ಲಿಂಗಪ್ಪ.—ಆ ಬಸ್ಸು ಖಾಸಗಿಯವರ ಕೈಯಲ್ಲಿದ್ದಾಗ ಬಸ್ಸಿಗೆ ಹತ್ತಬೇಕಾದರೆ ಕಾಲು ತೊಳೆದುಕೊಂಡು ಹತ್ತಬೇಕಾಗಿತ್ತು, ಆದರೆ ಇವತ್ತು ಅದೇ ಬಸ್ಸಿನಿಂದ ಇಳಿದ ಮೇಲೆ ಮೈ ತೊಳೆದುಕೊಳ್ಳಬೇಕಾಗಿದೆ. ಅದಕಾರಣ ಬಸ್ ಸ್ಟ್ಯಾಂಡಗಳಲ್ಲಿ ಬಚ್ಚಲು ಮನೆಗಳನ್ನು ಏರ್ಪಾಡು ಮಾಡುವುದು ಒಳ್ಳೆಯದು. ಏಕೆಂದರೆ ಆ ಬಸ್ಸುಗಳನ್ನು ಈ ಸ್ಥಿತಿಗೆ ತಂದಿಟ್ಟಿದ್ದಾರೆ. ಆದುದರಿಂದ ಚಲನಚಿತ್ರ ಮಂದಿರಗಳನ್ನು ರಾಷ್ಟ್ರೀಕರಣ ಮಾಡಿಕೊಳ್ಳುವ ಮೊದಲೇ ಅವುಗಳನ್ನು ರಾಷ್ಟ್ರೀಕರಣ ಮಾಡಿಕೊಂಡ ಮೇಲೆ ಯಾವ ರೀತಿ ನಡೆಸಿಕೊಂಡು ಹೋಗಬೇಕೆನ್ನುವ ಬಗ್ಗೆ ಸರಿಯಾದ, ಚೊಕ್ಕವಾದ, ದಕ್ಷವಾದ, ಏರ್ಪಾಡನ್ನು ಮಾಡಿಕೊಂಡು ಮುಂದಿನ ಕೆಲಸ ಮಾಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದರ ಬಗೆ ಮಾನ್ಯ ಕೃಷ್ಣನ್‌ರವರು ಪ್ರಸ್ತಾಪ ಮಾಡಿದಾಗ ಫಿಲಂ ಪ್ರೊಡಕ್ಷನ್ನನ್ನು ನ್ಯಾಶನಲೈಸ ಮಾಡಬೇಕೆಂದು ಹೇಳಿದರು. ಆದರೆ ಫಿಲಂ ಪ್ರೊಡಕ್ಷನ್ನನ್ನು ನ್ಯಾಶನಲೈಸ್ ಮಾಡಿ ಸರ್ಕಾರದವರೇ ಸಿನಿಮಾ ತೆಗೆಯುವ ವಿಚಾರವನ್ನು ನಾನು ಒಪ್ಪುವುದಿಲ್ಲ. ಕಾರಣ ಏನೆಂದರೆ ಈ ಗಾಗಲೇ ಸರ್ಕಾರದವರು ನ್ಯೂಸ್ ಐಟಂಗಳನ್ನು ಕೊಡುವುದಕ್ಕೆ ಬೇಕಾದಷ್ಟು ಏರ್ಪಾಡುಗಳನ್ನು ಮಾಡಿಕೊಂಡಿದ್ದಾರೆ. ಚಲನಚಿತ್ರಗಳಲ್ಲಿ ತಮ್ಮ ಸುಂದರವಾದ ಮುಖಗಳನ್ನು ಮತ್ತು ಇತ್ಯಾದಿಗಳನ್ನು ತೋರಿಸುವುದಕ್ಕೆ ಸಾಕಷ್ಟು ಏರ್ಪಾಡುಗಳನ್ನು ಮಾಡಿಕೊಂಡಿದ್ದಾರೆ. ಆದುದರಿಂದ ಅಷ್ಟೇ ಇದ್ದರೆ ಸಾಕು. ಇವತ್ತು ತಾವು ಕಲಾಕ್ಷೇತ್ರದಲ್ಲಿ ಕೈಹಾಕಿದರೆ ಕರಾಳ ಕೈಹಾಕಿದ ಹಾಗಾಗುತ್ತದೆ, ಲಕ್ಷಾಂತರ ಜನರಿಗೆ ತಾವು ಒಂದು ದೊಡ್ಡ ಅನ್ಯಾಯ ಮಾಡಿದಂತಾಗುತ್ತಥೆ, ಕಲ್ಯಾಣವನ್ನು ಹಾಳು ಮಾಡಿದಂತಾಗುತ್ತದೆ. ನಂತರ ಅರ್ಥ ಮಂತ್ರಿಗಳು, ಮುಖ್ಯಮಂತ್ರಿಗಳು, ಕಂದಾಯ ಮಂತ್ರಿಗಳಿಗೂ ಸಹ ನಾನು ಏತಕ್ಕೆ ಇದರಲ್ಲಿ ಹೀರೋ ಪಾತ್ರ ಮಾಡಬಾರದೆಂಬ ಆಲೋಚನೆ ಬರಬಹುದು. ಆದುದರಿಂದ ಆ ಮಟ್ಟಕ್ಕೆ ತಾವು ಹೋದರೆ ಬಹಳ ಕಷ್ಟವಾಗುತ್ತದೆ, ಏಕೆಂದರೆ ಬೆಂಗಳೂರಿನ ಕಾರ್ಯಕ್ರಮ ಬಂದರೆ ಕರ್ನಾಟಕದವರಿಗೆ ಸಂತೋಷವಾಗುತ್ತದೆ, ಅದು ಬಿಟ್ಟು ಬಟ್ಟಿಗೆ ವಿವಿಧ ಭಾರತಿ, ಪಂಚರಂಗಿ ಕಾರ್ಯಕ್ರಮಗಳು ಬಂದರೆ ಕೇಳುವುದಕ್ಕೆ ಹೇಸಿಗೆಯಾಗುತ್ತದೆ. ತಾವು ಬೀದಿಯಲ್ಲಿ ನಡೆಯದೆ ಒಮ್ಮಿಂದೊಮ್ಮೆಗೇ ಆಕಾಶಕ್ಕೆ ಹೋದರೆ ಮುಂದೆ ನೋಡುವವರಿಗೆ ಬೇಜಾರಾಗಬಹುದು. ಆದುದರಿಂದ ಆ ಕಸಬಿಗೆ ಮಾತ್ರ ತಾವು ಕೈಹಾಕಬಾರದು. ನಮ್ಮ ರಾಜ್ಯದಲ್ಲಿ ಸಿನಿಮಾ ತೆಗೆಯುವುದಕ್ಕೆ ರಾಜ ವಿಕ್ರಮ ತಂಡವನ್ನು ಕರೆಸಿದ್ದೀರಿ. ರಾಜ ವಿಕ್ರಮ ಸಿನೆಮಾದಲ್ಲಿ ಪಾತ್ರ ವಹಿಸಿದಂತಹ ಕೆಂಪುರಾಜ ಅರಸರನ್ನು ಕರೆಸಿದಿರಿ. ಆ ವಿಷಯಕ್ಕೆ ನಾವು ಹೋಗುವುದಿಲ್ಲ. ಆದುದರಿಂದ ಸಿನೆಮಾ ತೆಗೆಯುವವರೆಗೆ ಹೋಗುವುದು ಬೇಡ. ಆದರೆ ಸಿನೆಮಾ ಮಂದಿರಗಳನ್ನು ವಶಪಡಿಸಿಕೊಂಡರೆ ಬೇಕಾದಷ್ಟು ಅನುಕೂಲವಾಗುತ್ತದೆಂದು ಹೇಳುತ್ತೇನೆ, ಮತ್ತು ಮನರಂಜನೆ ಅದೆ ರೀತಿ ಇರುವುದು ಒಳ್ಳೆಯದೆಂದು ಹೇಳುತ್ತೇನೆ. ಶ್ರೀಮಾನ್ ಕೃಷ್ಣನ್‌ರವರು ಸಮತಾವಾದ ಎಂಬ ಶಬ್ದವನ್ನು ಉದ್ದಕ್ಕೂ ಉಪಯೋಗಿಸುತ್ತಾರೆ. ಸಮತಾವಾದ ರಾಷ್ಟ್ರದಲ್ಲಿ ಮನರಂಜನೆಯ ಕಡೆ ಜನರ ಹೆಚ್ಚಿನ ಗಮನ ಹರಿಯುವಂತೆ ಏರ್ಪಾಡು ಮಾಡುವುದು ಒಳ್ಳೆಯದೆಂದು ಅವರ ಅಭಿಪ್ರಾಯ. ಕಾರಣ ಏನೆಂದರೆ ಆಕಡೆ ಹೆಚ್ಚು ಜನರನ್ನು ಕಳುಹಿಸದೆ ಹೋದರೆ, ಈ ಕಡೆ ಅಧಿಕಾರ ಹೇಗೆ ನಡೆಸುತ್ತಾರೆ ರಾಜಕೀಯ ಹೇಗೆ ನಡೆಸುತ್ತಾರೆಂಬ ಕಡೆ ಜನತೆಯ ಗಮನ ಬಂದರೆ ಅನೇಕ ಪರಿಣಾಮಗಳಾಗುತ್ತವೆ. ಆ ದೃಷ್ಟಿಯಿಂದ ಹೆಚ್ಚು ಹೆಚ್ಚು ಜನರನ್ನು ಈ ಕಡೆ ಗಮನ ಬಾರದ ಹಾಗೆ ಆ ಕಡೆ ಕಳುಹಿಸುವ ವ್ಯವಸ್ಥೆ ಸಮತಾವಾದಿ ರಾಷ್ಟ್ರದಲ್ಲಿ ಇರುವುದು ಸತ್ಯ ಅದಕ್ಕೋಸ್ಕರ ಅವರು ಹೇಳಿದ ವಿಚಾರಕ್ಕೆ ಅವರನ್ನು ನಾನು ಅಭಿನಂದಿಸುತ್ತೇನೆ. ನಮ್ಮ ಅರ್ಥಸಚಿವರು ಒಂದು ತರಹ ಒಳ್ಳೆಯವರು ಎಂದು ತಿಳಿದುಕೊಂಡಿದ್ದೆ. ಟ್ಯಾಕ್ಸ್ ಹಾಕುವುದು ಒಂದನ್ನು ಬಿಟ್ಟರೆ ನಿಜವಾಗಿ ಒಳ್ಳೆಯವರು. ಮೊದಲು ಅವರು ಮಂತ್ರಿಗಳು ಆಗುವುದಕ್ಕೆ ಮುಂಚೆ ತುಂಬಾ ಒಳ್ಳೆಯವರಾಗಿದ್ದರು. ಅದೇ ರೀತಿ ಅರ್ಥಮಂತ್ರಿಗಳಾದ ಮೇಲೆ ರಾಜ್ಯದ ಜನತೆಗೆ ತೆರಿಗೆಯ ಭಾರವನ್ನು ಕಡಿಮೆ ಮಾಡುತ್ತಾರೆಂದು ನಿರೀಕ್ಷಣೆ ಮಾಡಿದ್ದೆವು. ಆದರೆ ಈಗ ಅದಕ್ಕೆ ತದ್ವಿರುದ್ಧವಾಗಿದೆ.

MR. DEPUTY SPEAKER.—There should be decorum and dignified anguage when a member refers about the Government. There should be a limite to all these things

ಶ್ರೀ ಕೋಣಂದೂರು ಲಿಂಗಪ್ಪ.—ಆದ್ದರಿಂದ ಇವೊತ್ತು ಅರ್ಥ ಮಂತ್ರಿಗಳು ಪ್ರತಿ ವರ್ಷ ಒಂದಲ್ಲ ಒಂದು ತೆರಿಗೆಯನ್ನು ಹಾಕುತ್ತಿದ್ದಾರೆ. ಆದಕಾರಣ ಅವರು ಮುಖ್ಯವಾಗಿ ಯೋಚನೆ ಮಾಡಬೇಕು. ಅವರು ಒಳ್ಳೆಯ ಸುಂದರವಾದ ಸ್ವಪ್ನವನ್ನು ಕಂಡಿರತಕ್ಕವರು. ಈ ದೃಷ್ಟಿಯಿಂದ ಈ ಬಗ್ಗೆ ಮಾನ್ಯ ಅರ್ಥ ಮಂತ್ರಿಗಳು ಒಂದು ಹೆಜ್ಜೆಯನ್ನು ಹಿಂದಕ್ಕೆ ಇಡಬೇಕು. ಶ್ರೀಮಾನ್ ಕೃಷ್ಣನ್ ಅವರು ಹೇಳಿದ ಹಾಗೆ ಈ ತೆರಿಗೆಯಿಂದ ಆಗತಕ್ಕಂಥಾ ಅನ್ಯಾಯ ಯಾರ ಮೇಲೆ ಬೀಳುತ್ತದೆ ಎಂಬುದನ್ನು ಯೋಚನೆ ಮಾಡಿದರೆ ಅರ್ಥವಾಗುತ್ತದೆ. ಎಂದು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ.

ಟ್ಯಾಕ್ಸ್ ಫ್ರೀ ಬಗ್ಗೆ ಇದರಲ್ಲಿ ಹೇಳಿದ್ದಾರೆ. ಕೆಲವು ಒಳ್ಳೆಯ ಕನ್ನಡ ಸಿನಿಮಾಗಳಿಗೆ ಟ್ಯಾಕ್ಸ್ ಫ್ರೀ ಕೊಟ್ಟಿದ್ದಾರೆ. ಅದಕ್ಕಾಗಿ ನಾನು ಮಾನ್ಯ ಅರ್ಥ ಮಂತ್ರಿಗಳನ್ನು ಅಭಿನಂದಿಸುತ್ತೇನೆ. ಇಂಗ್ಲೀಷ್ ಚಿತ್ರಗಳಿಗೆ ಯಾವುದಕ್ಕೆ ಟ್ಯಾಕ್ಸ್ ಫ್ರೀ ಕೊಟ್ಟಿದ್ದಾರೆಯೋ ನನಗೆ ಗೊತ್ತಿಲ್ಲ. ನಾನು ಇಂಗ್ಲೀಷ್ ಸಿನಿಮಾವನ್ನು ನೋಡುವುದೇ ಇಲ್ಲ ಎಂದು ಹೇಳುವುದಿಲ್ಲ. ಎಲ್ಲೋ ಯಾವಾಗಲೋ ಒಂದು ನೋಡಬಹುದು. ಆದ್ದರಿಂದ ನಾನು ಇಂಗ್ಲೀಷ್ ಸಿನಿಮಾಗಳಿಗೆ ಟ್ಯಾಕ್ಸ್ ಫ್ರೀ ಕೊಟ್ಟಿರುವುದಕ್ಕೆ ನನ್ನ ವಿರೋಧವಿಲ್ಲ. ಕನ್ನಡ ಚಿತ್ರಗಳಿಗೆ ಕೆಲವು ಒಳ್ಳೆಯ ಸಿನಿಮಾಗಳಿಗೆ ಟ್ಯಾಕ್ಸ್ ಫ್ರೀ ಕೊಟ್ಟಿದಾರೆ. ಇದರ ಬಗ್ಗೆ ನಾನು ಹೇಳುವುದಿಲ್ಲ. ಒಳ್ಳೆಯ ಸಿನಿಮಾಗಳು ಹಳ್ಳಿಗಳಲ್ಲಿ ಪ್ರದರ್ಶನ ವಾಗಿ ನಿಜವಾಗಿ ಜನಗಳಿಗೆ ಒಂದು ರೀತಿಯ ವಿಚಾರ ಪ್ರಚೋದನೆಯಾಗುತ್ತದೆ. ಈಗ ಉದಾಹರಣೆಗೆ ಹೇಳುವುದಾದರೆ ಚೋಮನದುಡಿ ಸಿನಿಮಾ ಬಂದಿತ್ತು, ಇದು ಒಳ್ಳೆಯ ಚಿತ್ರ. ನಮ್ಮ ಡಾ. ಶಿವರಾಮಕಾರಂತರು ಬರೆದಂತಹ ಪುಸ್ತಕದ ಆಧಾರದ ಮೇಲೆ ಈ ಚಿತ್ರವನ್ನು ತೆಗೆದಿದ್ದಾರೆ ಈ ಚೋಮನ ದುಡಿ ಪುಸ್ತಕವನ್ನು ಡಾ. ಶಿವರಾಮಕಾರಂತರು 1930-35 ರಲ್ಲೇ ಬರೆದಿದ್ದಾರೆ. ಇದರಲ್ಲಿ ಭೂಸುಧಾರಣೆಯ ಸಮಸ್ಯೆಗೆ ಒಂದು ಹೆಚ್ಚಿನ ಪ್ರೋತ್ಸಾಹವನ್ನು ಕೊಡುವಂತೆ ಬಹಳ ಆಳವಾದ ಅನುಭವದಿಂದ ವಿಚಾರ ಮಾಡಿ 1930 35 ನೇ ಇಸವಿಯಲ್ಲೇ ಇದನ್ನು ಅವರು ಬರೆದಿದ್ದಾರೆ. ಈ ದೃಷ್ಟಿಯಿಂದ ಈ ಚೋಮನ ದುಡಿ ಒಂದು ಉತ್ಕೃಷ್ಟವಾದ ಸಿನಿಮಾ ಎಂದು ಹೇಳಬಹುದು. ಹಾಗೆಯೇ ಸಂಸ್ಕಾರ ಚಿತ್ರವೂ ಸಹ ಒಂದು ಒಳ್ಳೆಯ ಸಿನಿಮಾ ಎಂದು ಹೇಳಬಹುದು. ಇಂಥಾ ಕೆಲವು ಒಳ್ಳೆಯ ಕನ್ನಡ ಸಿನಿಮಾಗಳಿಗೆ ಟ್ಯಾಕ್ಸ್ ಫ್ರೀ ಕೊಡಬೇಕು. ಮತ್ತು ಕನ್ನಡ ಚಿತ್ರಗಳು ಎಲ್ಲಾ ಸಿನಿಮಾ ಮಂದಿರಗಳಲ್ಲಿಯೂ ಕಡ್ಡಾಯವಾಗಿ ಪ್ರದರ್ಶನವಾಗಬೇಕೆಂದು ಸರ್ಕಾರದವರು ಆದೇಶವನ್ನು ಕೊಡಬೇಕು. ಬೆಂಗಳೂರಿನಲ್ಲಿ ಅಲಂಕಾರ ಚಿತ್ರಮಂದಿರ ಹಾಗೂ ಕೆಂಪೇಗೌಡ ಚೌಕದಲ್ಲಿರುವ ಚಿತ್ರಮಂದಿರಗಳಲ್ಲಿ ಪ್ರದರ್ಶನವಾದರೆ ಸಾಲದು ಎಲ್ಲಾ ಚಿತ್ರಮಂದಿರಗಳಲ್ಲೂ ಕನ್ನಡ ಚಿತ್ರಗಳು ಪ್ರದರ್ಶನವಾಗಬೇಕು. ಈ ರೀತಿಯ ಒಂದು ನಿಯಮವನ್ನು ಆದೇಶವನ್ನು ಎಲ್ಲಾ ಚಿತ್ರಮಂದಿರಗಳ ಮಾಲೀಕರಿಗೂ ಕೊಡಬೇಕು. ಇದರಲ್ಲಿ ವಿಶೇಷವಾಗಿ ಟೂರಿಂಗ್ ಟ್ಯಾಕೀಸುಗಳಿಗೆ ಟ್ಯಾಕ್ಸ್ ಹಾಕಿದ್ದಾರೆ. ಈ ಟೂರಿಂಗ್ ಟಾಕೀಸು ವಿಶೇಷವಾಗಿ ಹಳ್ಳಿಗಳಲ್ಲಿ ಮಾತ್ರ ಇರುತ್ತವೆ. ಅಲ್ಲಿ ಸಿನಿಮಾವನ್ನು ನೋಡುವುದಕ್ಕೆ ಬರುವವರು ಪಾಪದ ಜನಗಳು ನೆಲ ಹಿಡಿದ ಜನಗಳು ಹೊಲಗದ್ದೆಗಳಲ್ಲಿ ಕೆಲಸ ಮಾಡಿ ಸ್ವಲ್ಪ ಮನರಂಜನೆಯನ್ನು ಮಾಡಿಕೊಳ್ಳೋಣ ಎಂದು ಈ ಟೂರಿಂಗ್ ಟಾಕೀಸುಗಳಿಗೆ ಬಂದರೆ ಅವರ ಮೇಲೆ ಈ ಒಂದು ತೆರಿಗೆಯನ್ನು ತಾವು ಹೇರಿದ್ದೀರಿ. ಬೇಸಾಯ ಕೂಲಿಗಾರರು ಹೊಲ ಗದ್ದೆಗಳಲ್ಲಿ ಕೆಲಸಮಾಡಿ ಬೇಸತ್ತು ಈ ಟೂರಿಂಗ್ ಟಾಕೀಸುಗಳಿಗಾದರೂ ಹೋಗಿ ಸಿನಿಮಾ ನೋಡೋಣ ಎಂದರೆ ಅದಕ್ಕೂ ದುಬಾರಿ ತೆರಿಗೆಯನ್ನು ಹಾಕಿದ್ದಾರೆ. ಆ ರೇಟಿನಲ್ಲಿ ಅವರು ಟಿಕೆಟ್‌ಗಳನ್ನು ಕೊಳ್ಳುವುದಕ್ಕೆ ಆಗುವುದಿಲ್ಲ. ಇದು ತೀರಾ ಅನ್ಯಾಯ. ಆದ್ದರಿಂದ ಇವೊತ್ತು ಮಾನ್ಯ ಅರ್ಥಸಚಿವರು ಮನರಂಜನಾ ತೆರಿಗೆಯನ್ನು ಏನು ಹಾಕಬೇಕು ಎಂದು ಉದ್ದೇಶವನ್ನು ಇಟ್ಟುಕೊಂಡಿದ್ದಾರೆ ಈ ಬಗ್ಗೆ ಪುನರಾಲೋಚನೆ ಮಾಡಬೇಕು ಇದನ್ನು ವಾಪಸು ತೆಗೆದುಕೊಳ್ಳಬೇಕು. ಈಗ ಈ ಮಸೂದೆಯಲ್ಲಿ ತಂದಿತಕ್ಕ ತೆರಿಗೆಯನ್ನು ಹಾಕಬಾರದು ಎಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಈ ದ್ರಾವಿಡ ಪ್ರಾಣಾಯಾಮ ಮಾಡಿ ಹಣವನ್ನು ಸಂಪಾದನೆ ಮಾಡುವ ಬದಲು ನೇರವಾದ ದಿಟ್ಟ ಹೆಜ್ಜೆಯನ್ನು ಇಟ್ಟು ಚಿತ್ರ,

ಮಂದಿರಗಳನ್ನು ಸರ್ಕಾರದ ಸ್ವಾಧೀನಕ್ಕೆ ತೆಗೆದುಕೊಂಡರೆ ಹೆಚ್ಚಿನ ಪರಿಣಾಮಕಾರಿಯಾಗುತ್ತದೆ. ಆದ್ದರಿಂದ ಈ ಕೆಲಸವನ್ನು ಅದಷ್ಟು ಬೇಗ ಮಾಡಬೇಕು ಎಂದು ಒತ್ತಾಯ ಮಾಡಿ ಈ ತೆರಿಗೆಯನ್ನು ಕೈಬಿಡಬೇಕು ಎಂದು ಕೇಳಿಕೊಂಡು ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ.ಎಸ್. ವೀರಭದ್ರಪ್ಪ (ಕುಡ್ಲಿಗಿ).—ಮಾನ್ಯ ಉಪಾಧ್ಯಕ್ಷರೇ ಮಾನ್ಯ ಅರ್ಥ ಸಚಿವರು ಈ ಸಭೆಯಮುಂದೆ ತಂದಿರುವ ವಿಧೇಯಕವನ್ನು ವಿರೋಧಿಸುತ್ತಾ ನಾನು ಕೆಲಸ ಸೂಚನೆಗಳನ್ನು ಕೊಡಬಯಸುತ್ತೇನೆ. ಪ್ರತಿವರ್ಷವೂ ಕೂಡ ಸರ್ಕಾರದವರು ಈ ಒಂದು ಮನರಂಜನಾ ತೆರಿಗೆಯನ್ನು ಹೆಚ್ಚು ಮಾಡುತ್ತಾ ಬಂದಿರುವುದರಿಂದ ಚಿತ್ರಮಂದಿರಗಳ ಮಾಲೀಕರು ಟ್ಯಾಕ್ಸ್ ಅನ್ನು ತಪ್ಪಿಸುವುದಕ್ಕೆ ಒಂದು ಆಸ್ಪದವನ್ನು ಮಾಡಿಕೊಟ್ಟಹಾಗಾಗುತ್ತದೆ ಈಗ ಚಿತ್ರಮಂದಿರಗಳಲ್ಲಿ ಒಂದು ರೂಪಾಯಿಗೆ 33 ಪೈಸೆ ಮನರಂಜನಾ ತೆರಿಗೆ ಇತ್ತು. ಅದು ಈ ಒಂದು ಮಸೂದೆಯ ಪ್ರಕಾರ ಒಂದು ರೂಪಾಯಿಗೆ 40 ಪೈಸೆ ತೆರಿಗೆ ಬೀಳುತ್ತದೆ ಇದರಿಂದ ಚಿತ್ರಮಂದಿರಗಳ ಮಾಲೀಕರು ಹೆಚ್ಚಿಗೆ ಈ ಒಂದು ತೆರಿಗೆಯಿಂದ ತಪ್ಪಿಸಿಕೊಳ್ಳುವುದಕ್ಕೆ ಆಸ್ಪದವಾಗುತ್ತದೆ ಇದನ್ನು ಕಡಿಮೆ ಮಾಡಬೇಕು ಅಲ್ಲಿ ನಡೆಯತಕ್ಕ ಅನೇಕ ದೋಷಗಳ ಬಗ್ಗೆ ತಿಳುವಳಿಕೆಯನ್ನು ಕೊಟ್ಟರೂ ಕೂಡ ಟಿಕೆಟ್‌ಗಳಿಗೆ ಡೂಪ್ಲಿಕೇಟ್ ಸೀಲ್ ಹಾಕಿ ಸರ್ಕಾರಕ್ಕೆ ಮೋಸ ಮಾಡುತ್ತಿದ್ದಾರೆ. ತೆರಿಗೆಯಿಂದ ತಪ್ಪಿಸಿಕೊಳ್ಳುತ್ತಿದ್ದಾರೆ. ಅಧಿಕಾರಿಗಳು ಮತ್ತು ಸಿನಿಮಾ ಮಂದಿರಗಳ ಮಾಲೀಕರು ಸೇರಿಕೊಂಡು ಈ ಮನರಂಜನಾ ತೆರಿಗೆಯನ್ನು ತಪ್ಪಿಸುವುದಕ್ಕೆ ಅನುವು ಮಾಡಿಕೊಟ್ಟಿದ್ದಾರೆ ಇದನ್ನು ತಪ್ಪಿಸುವುದಕ್ಕೆ ನಾನು ಒಂದು ಸೂಕ್ತ ಸಲಹೆಯನ್ನು ಕೊಡುತ್ತೇನೆ. ಅದನ್ನು ಸರ್ಕಾರದವರು ಪರಿಶೀಲನೆ ಮಾಡಿ ಅದು ಸೂಕ್ತ ಎಂದು ತಿಳಿದರೆ ಅದನ್ನು ಜಾರಿಗೆ ತರಬಹುದು. ಈಗ ಬಸ್ಸುಗಳಲ್ಲಿ ಒಂದು ಸೀಟಿಗೆ ಇಷ್ಟು ತೆರಿಗೆ ಎಂದು ಗೊತ್ತು ಮಾಡಿ ಮೂರು ತಿಂಗಳಿಗೆ ಒಂದು ಸಾರಿ ತೆರಿಗೆಯನ್ನು ಕಟ್ಟುವಂತೆ ಗೊತ್ತು ಮಾಡಿದ್ದಾರೆ. ಅದೇ ರೀತಿ ಸಿನಿಮಾ ಮಂದಿರಗಳಿಗೆ ಜನಸಂಖ್ಯೆಯ ಆಧಾರದ ಮೇಲೆ ಒಂದು ಲಕ್ಷ ಪ್ರಜಾಸಂಖ್ಯೆ ಇರುವ ಪಟ್ಟಣಗಳಲ್ಲಿ ಒಂದು ಸಿನಿಮಾ ಮಂದಿರಕ್ಕೆ ಸೀಟಿನ ಆಧಾರದ ಮೇಲೆ ಮೂರು ತಿಂಗಳಿಗೆ ಇಷ್ಟು ತೆರಿಗೆಯನ್ನು ಕೊಡಬೇಕು ಎಂದು ಗೊತ್ತು ಮಾಡಬೇಕು, ಒಂದು ಲಕ್ಷಕ್ಕಿಂತ ಜಾಸ್ತಿ ಪ್ರಜಾ ಸಂಖ್ಯೆ ಇರುವ ಪಟ್ಟಣಗಳಲ್ಲಿರತಕ್ಕ ಸಿನಿಮಾ ಮಂದಿರಗಳವರು ಮೂರು ತಿಂಗಳಿಗೆ ಇಷ್ಟು ತೆರಿಗೆಯನ್ನು ಕೊಡಬೇಕು ಎಂದು ಗೊತ್ತು ಮಾಡಬೇಕು ಸಿನಿಮಾ ಮಂದಿರಗಳ ಕ್ಯಪಾಸಿಟಿಯ ಮೇಲೆ ಒಂದು ಸೀಟಿಗೆ ಒಂದು ದಿವಸಕ್ಕೆ ಇಷ್ಟು ತೆರಿಗೆಯನ್ನು ಕೊಡಬೇಕು ಎಂದು ಟ್ಯಾಕ್ಸ್ ಹಾಕಬೇಕು. ಆ ರೀತಿ ಮಾಡಿ ಸಿನಿಮಾ ಮಂದಿರಗಳಿಗೆ ಲೈಸೆನ್ಸ್ ಕೊಡುವ ವ್ಯವಸ್ಥೆ ಮಾಡಬೇಕು. ಆ ರೀತಿ ಮಾಡುವುದಾದರೆ ಈ ತೆರಿಗೆ ಈಗ ಏನು ಸೋರಿಹೋಗುತ್ತದೆ ಅದು ಕಡಿಮೆಯಾಗುತ್ತದೆ, ಮತ್ತು ಲಂಚಗುಳಿತನವೂ ಕಡಿಮೆಯಾಗುತ್ತದೆ ಈ ಒಂದು ಅಂಕಿ ಸಂಖ್ಯೆಗಳನ್ನು ನಮ್ಮ ರಾಜ್ಯದಲ್ಲಿರುವ ಸಿನಿಮಾ ಮಂದಿರಗಳಿಂದ ತರಿಸಿಕೊಂಡು ಹಿಂದಿನ ವರ್ಷ ಎಷ್ಟು ತೆರಿಗೆ ಇತ್ತು, ಎಂಬುದನ್ನು ನೋಡಿಕೊಂಡು ಅದರ ಒಂದು ಆಧಾರದ ಮೇಲೆ ಪ್ರತಿಯೊಂದು ಸೀಟಿಗೂ ಇಷ್ಟು ತೆರಿಗೆಯನ್ನು ಹಾಕಬೇಕು ಎಂದು ಗೊತ್ತು ಮಾಡಬೇಕು. ಈ ದೃಷ್ಟಿಯಿಂದ ಈ ಒಂದು ಸಲಹೆಯನ್ನು ಸರ್ಕಾರದವರು ಪರಿಶೀಲನೆ ಮಾಡಬೇಕು. ಚಿತ್ರಮಂದಿರಗಳ ಮೇಲೆ ಸರ್ಕಾರದವರು ಒಂದು ಹತೋಟಿಯನ್ನು ಇಟ್ಟುಕೊಳ್ಳಬೇಕಾಗುತ್ತದೆ. ಬೆಂಗಳೂರು ಮತ್ತು ದೊಡ್ಡ ದೊಡ್ಡ ಜಿಲ್ಲಾ ಕೇಂದ್ರಗಳಲ್ಲಿ ಡಿಸ್ಟ್ರಿಬ್ಯೂಟರ್ಸ್ ಹೈರ್ ಪರ್ಚೇಜ್ ಮೇಲೆ ಮತ್ತು ಫಿಕ್ಸೆಡ್ ಹೈರ್ ಮೇಲೆ ಪಿಕ್ಚರ್‌ಗಳನ್ನು ಪ್ರದರ್ಶನಕ್ಕೆ ಕೊಡುವುದರಿಂದ ಈಗ ಒಂದು ಟ್ಯಾಕ್ಸ್ ಸೋರಿಹೋಗುತ್ತದೆ. ಇದನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡಬೇಕು. ಈ ದೃಷ್ಟಿಯಿಂದ ಸಿನಿಮಾ ಪ್ರೊಡ್ಯೂಸರ್ಸ್ ಮತ್ತು ಡಿಸ್ಟ್ರಿಬ್ಯೂಟರ್ಸ್‌ಗಳ ಮೇಲೆ ಸರ್ಕಾರದವರು ಹತೋಟಿಯನ್ನು ಇಟ್ಟುಕೊಳ್ಳಬೇಕು. ಈ ಒಂದು ತೆರಿಗೆಯನ್ನು ತಪ್ಪಿಸಿಕೊಳ್ಳುವವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಪರ್ಸೆಂಟೇಜ್ ಮೇಲೆ ಚಿತ್ರಗಳನ್ನು ಪ್ರದರ್ಶನಕ್ಕೆ ಡಿಸ್ಟ್ರಿಬ್ಯೂಟ್ ಮಾಡಿದರೆ ಚಿತ್ರಮಂದಿರದ ಮಾಲೀಕರು ಟ್ಯಾಕ್ಸಿನಿಂದ ತಪ್ಪಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುವುದಿಲ್ಲ. ಆದ್ದರಿಂದ ಸರ್ಕಾರದವರು ಡಿಸ್ಟ್ರಿಬ್ಯೂಟರ್ಸ್ ಮೇಲೆ ಹತೋಟಿಯನ್ನು ಇಟ್ಟುಕೊಳ್ಳುವುದು ಒಳ್ಳೆಯದು,

ಇನ್ನೊಂದು ವಿಷಯ. ಬೆಂಗಳೂರಿನಲ್ಲಿ ನಾವು ನೋಡುತ್ತಿದ್ದೇವೆ. ಪ್ರತಿಯೊಂದು ಚಿತ್ರಮಂದಿರದ ಮುಂದೆಯೂ ಕೂಡ ಹೌಸ್‌ಫುಲ್ ಎಂದು ಬೋರ್ಡ್ ಹಾಕುತ್ತಾರೆ. ಅದರ ಅರ್ಥ ಏನು ಎಂದರೆ ಟಿಕೆಟ್‌ಗಳನ್ನು ಬ್ಲಾಕ್‌ಮಾರ್ಕೆಟ್ಟಿನಲ್ಲಿ ಮಾರುವುದಕ್ಕೆ ಹೌಸ್‌ಫುಲ್ ಎಂದು ಬೋರ್ಡ್

ಹಾಕುತ್ತಾರೆ. ಇಂಥಾ ಸಂದರ್ಭಗಳು ಆಗದು ಹಾಗೆ ಹೌಸ್‌ಫುಲ್ ಎಂದು ಬೋರ್ಡ್ ಹಾಕಿದಾಗ ಸಂಬಂಧಪಟ್ಟ ಅಧಿಕಾರಿಗಳು ಆ ಸಿನಿಮಾ ಮಂದಿರವನ್ನು ಚೆಕ್ ಮಾಡಿ ಅದು ಹೌಸ್‌ಫುಲ್ ಆಗಿದೆಯೋ ಅಥವಾ ಇಲ್ಲವೋ ಎಂಬುದನ್ನು ಚೆಕ್ ಮಾಡಿ ಒಂದುವೇಳೆ ಅದು ಹೌಸ್‌ಫುಲ್ ಆಗದಿದ್ದರೂ ಹೌಸ್‌ಫುಲ್ ಆಗಿದ್ದರೆ ಎಷ್ಟು ಟ್ಯಾಕ್ಸ್ ಕೊಡಬೇಕೋ ಅಷ್ಟು ಟ್ಯಾಕ್ಸ್ ವಸೂಲು ಮಾಡುವಂತೆ ಮಾಡಬೇಕು. ಆದಕಾರಣ ಸಿನಿಮಾ ಮಂದಿರಗಳಲ್ಲಿ ಹೌಸ್‌ಫುಲ್ ಎಂದು ಬೋರ್ಡ್ ಹಾಕಿದಾಗ ಅದು ಹೌಸ್‌ಫುಲ್ ಆಗಿದೆಯೋ ಇಲ್ಲವೇ ಎಂಬುದನ್ನು ಚೆಕ್ ಮಾಡುವುದು ಒಳ್ಳೆಯದು ಎಂದು ನಾನು ಸೂಚಿಸುತ್ತೇನೆ.

4–00 P.M.

ಈಗ ನಮ್ಮ ಮಾನ್ಯ ಅರ್ಥ ಮಂತ್ರಿಗಳು ಹಳ್ಳಿಗಳಲ್ಲಿ ಮನರಂಜನೆ ಕಾರ್ಯಕ್ರಮ ಬಹಳ ಅವಶ್ಯಕ ಇದೆ ಬಡವರಿಗೆ ಅನುಕೂಲವಾಗುತ್ತದೆ ಎಂದು ಹೇಳಿದರು. ಆದರೆ ಈಗ ಸರ್ಕಾರದವರು ಟೂರಿಂಗ್ ಟಾಕೀಸಿಗೆ ಲೈಸನ್ಸ್ ಕೊಡುವಾಗ 10–15 ಸಾವಿರ ಪಾಪುಲೇಷನ್ ಇರುವ ಕಡೆ 1–6 ಕಿಲೋಮೀಟರ್ ದೂರದಲ್ಲಿ ಇದ್ದರೆ ಲೈಸನ್ಸ್ ಕೊಡಬೇಕು ಎಂದು ಸರ್ಕಾರದ ಆದೇಶ ಇದೆ ಟೂರಿಂಗ್ ಟಾಕೀಸಿಗೆ ಇವತ್ತು ಏನು ಫಿಕ್ಸ್ ಮಾಡಿದ್ದಾರೆ, ಆ ಒಂದ ಮೈಲಿ ದೂರದಲ್ಲಿ ಹಳ್ಳಿಗಳಲ್ಲಿ ಟೂರಿಂಗ್ ಟಾಕೀಸ್‌ನ್ನು ಹಾಕಿದರೆ ನಡೆಸಲಿಕ್ಕೆ ಸಾಧ್ಯವೇ, ಇದನ್ನು ಸರ್ಕಾರ ಪರಿಶೀಲನೆ ಮಾಡಬೇಕು. ಟೂರಿಂಗ್ ಟಾಕೀಸ್ ಎಂದರೆ, ಬಹಳ ಕಡಿಮೆ ಎಂದರೆ 40-50 ಸಾವಿರ ರೂಪಾಯಿಗಳಲ್ಲಿ ಟೂರಿಂಗ್ ಟಾಕೀಸ್ ಹಾಕಿಕೊಂಡು ಒಂದು ರೂಪಾಯಿ, 12 ಆಣೆ, 8 ಆಣೆ ದರದಲ್ಲಿ ಬಡವರಿಗೆ ಸಿನಿಮಾವನ್ನು ತೋರಿಸುತ್ತಾರೆ. ಆದುದರಿಂದ ಟೂರಿಂಗ್ ಟಾಕೀಸ್‌ಗಳಿಗೆ 1–6 ಕಿಲೋಮೀಟರ್ ದೂರದಲ್ಲಿ ಹಾಕಬೇಕು ಎನ್ನುವ ರಿಸ್ಟ್ರಿಕ್ಷನ್‌ನ್ನು ರದ್ದುಮಾಡಿ ಟೌನ್ ಲಿಮಿಟ್ಸ್‌ನೊಳಗೆ ಪರವಾನಗಿ ಕೊಡಲಿಕ್ಕೆ ಮಾಡಬೇಕು ಎಂದು ಸೂಚನೆ ಮಾಡುತ್ತೇನೆ. ಆದಕಾರಣ ಸರ್ಕಾರ ಪ್ರತಿಸಲ ಸುಮ್ಮನೆ ಟ್ಯಾಕ್ಸ್ ಹೆಚ್ಚಿಗೆ ಮಾಡಿ ಸರ್ಕಾರಕ್ಕೆ ಇಷ್ಟು ಟ್ಯಾಕ್ಸ್ ಬರುತ್ತದೆ ಎಂದು ಅಪೇಕ್ಷೆ ಪಟ್ಟಿರುವುದು ನಿಜ, ಆದರೆ ಅದು ಬರುವುದಿಲ್ಲ. ಇದರಿಂದ ಚಿತ್ರಮಂದಿರದ ಮಾಲೀಕರಿಗೆ, ಡಿಸ್ಟ್ರಿಬ್ಯೂಟರ್ಸ್‌ಗೆ ಹೆಚ್ಚಿಗೆ ಹಣ ಮಾಡಿಕೊಟ್ಟಂತಾಗುತ್ತದೆ. ಅವರು ಟ್ಯಾಕ್ಸಿನಿಂದ ತಪ್ಪಿಸಿಕೊಳ್ಳಲಿಕ್ಕೆ ಅವಕಾಶವಾಗುತ್ತದೆ. ಆದುದರಿಂದ ಮಾನ್ಯ ಮಂತ್ರಿಗಳು ತಂದಿರತಕ್ಕ ಬಿಲ್ಲನ್ನು ವಾಪಸ್ ತೆಗೆದುಕೊಳ್ಳಬೇಕು ಎಂದು ವಿನಂತಿಸಿ, ಅಧ್ಯಕ್ಷರು ನನಗೆ ಮಾತನಾಡಲು ಇಷ್ಟು ಸಮಯ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ವೈ. ಘೋರ್ಪಡೆ.—ಮಾನ್ಯ ಅಧ್ಯಕ್ಷರೇ ಈ ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್‌ನ ಭಾರ ಹೆಚ್ಚಾಗಿದೆ, ಇದನ್ನು ಕಡಿಮೆ ಮಾಡಬೇಕು ಎನ್ನುವುದೇ ಮುಖ್ಯವಾದಂಥ ವಾದ. ಆದುದರಿಂದ ಇದರ ಬಗ್ಗೆ ನಾವು ಬೇರೆ ರಾಜ್ಯಗಳಲ್ಲಿ ಪರಿಸ್ಥಿತಿ ಏನಿದೆ ಅದಕ್ಕೆ ಹೋಲಿಸುವುದು ಬಹಳ ಮುಖ್ಯವಾದಂಥಾದ್ದು. ನಾನು ಇದನ್ನು ಮಂಡನೆ ಮಾಡುವಾಗ ಹೇಳಿದೆ. ತಮಿಳುನಾಡು ರಾಜ್ಯದಲ್ಲಿ ಏನು ಪರಿಸ್ಥಿತಿ ಇದೆ, ಅದಕ್ಕೆ ಹೋಲಿಸಿ ನೋಡಿದರೂ ನಾವು ಹಾಕಿರತಕ್ಕ ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್ ಬಹಳ ಕಡಿಮೆ. ತಮಿಳುನಾಡು ರಾಜ್ಯದಲ್ಲಿ ಬೇರೆ ಏನು ಪರಿಸ್ಥಿತಿ ಇದ್ದರೂ ಈ ಸಿನಿಮಾ ಬಗ್ಗೆ ಬಹಳ ಹೆಚ್ಚಿನ ಆಸಕ್ತಿಯನ್ನು ವಹಿಸಿದ್ದಾರೆ. ಆದುದರಿಂದ ಅಲ್ಲಿ ಏನು ಪರಿಸ್ಥಿತಿ ಇದೆ ಅದಕ್ಕೆ ಹೋಲಿಸಿದರೆ ತಪ್ಪೇನೂ ಆಗಲಿಕ್ಕಿಲ್ಲ. ಈಗ ನಮ್ಮ ರಾಜ್ಯದಲ್ಲಿ ನಾವು ಈಗ ಹೊಸದಾಗಿ ಹಾಕಿರತಕ್ಕ ಅಡೀಷನಲ್ ಟ್ಯಾಕ್ಸ್‌ನ್ನೂ ಸೇರಿಸಿಕೊಂಡು ನೋಡಿದರೆ ಪರಿಸ್ಥಿತಿ ಈ ರೀತಿ ಇದೆ. ತಮಿಳುನಾಡು ರಾಜ್ಯದಲ್ಲಿ 99 ಪೈಸೆ ಇದ್ದರೆ ಕರ್ನಾಟಕದಲ್ಲಿ 70 ಪೈಸೆ ಇದೆ. ತಮಿಳುನಾಡಿನಲ್ಲಿ 1–30 ಪೈಸೆ ಇದ್ದರೆ ಕರ್ನಾಟಕದಲ್ಲಿ 90 ಪೈಸೆ ಇದೆ. ಅಡೀಷನಲ್ ಟ್ಯಾಕ್ಸನ್ನೂ ಸೇರಿಸಿಕೊಂಡು ನಾನು ಹೇಳುತ್ತಿರುವುದು. ಆಮೇಲೆ ತಮಿಳುನಾಡಿನಲ್ಲಿ 2–47 ಪೈಸೆ ಇದ್ದರೆ ಕರ್ನಾಟಕದಲ್ಲಿ 2-05 ಪೈಸೆ ಇದೆ ನಾನು ಹೇಳುತ್ತಾ ಇರುವುದು ಅಡ್ಮಿಷನ್ ರೇಟ್ಸ್. ತಮಿಳುನಾಡಿನಲ್ಲಿ 2-81 ಪೈಸೆ ಇದ್ದರೆ ನಮ್ಮ ರಾಜ್ಯದಲ್ಲಿ 2-35 ಪೈಸೆ ಇದೆ. ಅವರದು 2 91 ಪೈಸೆ ಇದ್ದರೆ ನಮ್ಮದು 2–50 ಪೈಸೆ ಇದೆ. ತಮಿಳುನಾಡಿನಲ್ಲಿ 3-92 ಪೈಸೆ ಇದ್ದರೆ ಕರ್ನಾಟಕದಲ್ಲಿ 3–30 ಪೈಸೆ ಇದೆ. ಅವರದು ಹೈಕ್ಲಾಸ್ 5 ರೂಪಾಯಿ ಇದ್ದರೆ ನಮ್ಮದು 4–40 ಪೈಸೆ ಇದೆ ಆದುದರಿಂದ ಕಂಪ್ಯಾರಿಟೀವಾಗಿ ನೋಡಿದರೆ ನಮ್ಮದು ಅಷ್ಟು ಜಾಸ್ತಿ ಏನಿಲ್ಲ ಕರ್ನಾಟದಲ್ಲಿ 954 ಟೆಂಪೊರಂ ಥಿಯೇಟರ್ಸ್ ಇವೆ. ಅದರಲ್ಲಿ 370

ಪರ್ಮನೆಂಟ್ ಥಿಯೇಟರ್ಸ್ 584 ಸಿಂಪೊರರಿ ಥಿಯೇಟರ್ಸ್ ಇದೆ. ಈಗ ಕೆಪಾಸಿಟಿ ದೃಷ್ಟಿಯಿಂದ ನೋಡಿದರೆ, ಮಾನ್ಯ ವೀರಭದ್ರಪ್ಪನವರು ಒಂದು ಸಲಹೆ ಮಾಡಿದರು. ಟ್ಯಾಕ್ಸ್ ಇವೇಶನ್‌ನ್ನು ತಪ್ಪಿಸುವ ದೃಷ್ಟಿಯಿಂದ ಕೆಪಾಸಿಟಿ ಆಧಾರದ ಮೇಲೆ ಟ್ಯಾಕ್ಸ್ ಹಾಕ ಬೇಕು ಎಂದು ಹೇಳಿದರು. ಇದನ್ನು ನಾವು ನೋಡಿಲ್ಲ ಎಂದಲ್ಲ ಆದನ್ನು ನಾನು ನೋಡಿಸಿದ್ದೇನೆ ಅದಕ್ಕೆ ಕಾನೂನು ಪ್ರಕಾರ ಕೆಲವು ತೊಂದರೆಗಳುಂಟು. ಆರೀತಿ ಹಾಕಲಿಕ್ಕೆ ಬರಲಿಕ್ಕಿಲ್ಲ ಎಂದು ನನ್ನ ಅಭಿಪ್ರಾಯವಿದೆ ತಮಿಳುನಾಡಿನಲ್ಲಿ ಕೂಡ ಇದೇ ರೀತಿ ಯೋಚನೆಮಾಡಿ ಕಾನೂನು ಬದ್ಧವಾಗಿ ಆರೀತಿ ವ್ಯವಸ್ಥೆ ಮಾಡಲಿಕ್ಕೆ ಸಾಧ್ಯವಾಗದೇ ಹೋದ್ದರಿಂದ ಸಂಪೂರ್ಣವಾಗಿ ಆ ವಿಚಾರವನ್ನು ಕೈಬಿಟ್ಟಿದ್ದಾರೆ. ಬೇಕಾದರೆ ಪುನಃ ಇದರ ಬಗ್ಗೆ ನೋಡಿಸೋಣ. ಇನ್ನಾವುದೇ ವಿಧಾನದಿಂದ ಆ ಒಂದು ವಿಚಾರವನ್ನು ಮುಂದುವರೆಸುವುದಕ್ಕೆ ಸಾಧ್ಯವಾದರೆ ಮಾಡೋಣ. ಯುಟಿಲೈಸೇಷನ್ ಆಫ್ ಕೆಪಾಸಿಟಿ ಏನು ಇದೆ. ಬೇರೆ ಬೇರೆ ಥಿಯೇಟರ್ಸ್‌ನಲ್ಲಿ ಎಷ್ಟು ನಮಗೆ ಟ್ಯಾಕ್ಸ್ ಬರುತ್ತಾ ಇದೆ ಆದನ್ನು ಕೆಪಾಸಿಟಿಗೆ ಹೋಲಿಸಿದರ ಅದರೆ ಪ್ರಮಾಣ ಎಷ್ಟು ಎನ್ನುವುದನ್ನು ನೋಡಿಸುತ್ತಾ ಇದ್ದೇವೆ. ಅದನ್ನು ನೋಡುವ ಉದ್ದೇಶ ಇಷ್ಟು. ಎಲ್ಲಾದರೂ ಕೆಪಾಸಿಟಿಗಿಂತ ಬಹಳ ಕಡಿಮೆ ಟ್ಯಾಕ್ಸ್ ಬರುತ್ತಾ ಇದ್ದರೆ ತಕ್ಷಣ ನಮ್ಮ ಸ್ಕ್ವಾಡ್‌ಗಳನ್ನು ಕಳಿಸಿ ನೋಡಿಸಲಿಕ್ಕೆ ಸಾಧ್ಯವಾಗುತ್ತದೆ. ಇವೇಶನ್ ಆಗುತ್ತಾ ಇದ್ದರೆ ಆದನ್ನು ತಪ್ಪಿಸಲಿಕ್ಕೆ ಇದೊಂದು ವಿಧಾನ. ಇಷ್ಟಾದರೂ ತಪ್ಪಿಸಲಿಕ್ಕೆ ಈ ರೀತಿ ಏರ್ಪಾಡು ಮಾಡಿದ್ದೇವೆ. ನಾನಾಗಲೇ ಹೇಳಿದ ಹಾಗೆ ನ್ಯಾಷನಲೈಸೇಷನ್ ಮಾಡುವ ಕಾಲ ಬಂದರೆ ಅದಕ್ಕೆ ಹಿಂಜರಿಯುವುದಿಲ್ಲ. ನ್ಯಾಷನಲೈಸೇಷನ್‌ನ್ನು ಬರೀ ಒಂದು ಅವಸರವಾಗಿ ಅಥವಾ ಐಡಿಯಾಲಜಿಕಲ್ಲಾಗಿ ಮಾಡುವಂಥಾದ್ದಲ್ಲ. ನ್ಯಾಷನಲೈ ಸೇಶನ್ ಮಾಡಬೇಕು ಎಂದರೆ, ಆದರಿಂದ ಏನಾದರೂ ಪರಿಸ್ಥಿತಿಯಲ್ಲಿ ಸ್ಪಷ್ಟವಾದಂಥ ಸುಧಾರಣೆ ಮಾಡಲಿಕ್ಕೆ ಸಾಧ್ಯ ಎಂದು ಕಂಡುಬಂದಾಗ, ನಾವು ಅದನ್ನು ಮಾಡಬೇಕು. ಇಲ್ಲದೇ ಹೋದರೆ ಅವಸರವಾಗಿ ಮಾಡಬಾರದು. ನ್ಯಾಷನಲೈಸೇಶನ್ ಅತ್ಯಾವಶ್ಯಕವಿದ್ದರೆ ಅದನ್ನು ಮಾಡಲಿಕ್ಕೆ ಹಿಂಜರಿಯುವುದಿಲ್ಲ ಇದಕ್ಕೆ ಮುಂಚೆ ಕೆಲವು ಕ್ರಮಗಳನ್ನು ನಾವು ಈ ಬಿಲ್‌ನಲ್ಲಿ ಸೇರಿಸಿದ್ದೇವೆ. ಅವರಿಗೆ ಸ್ವಲ್ಪ ಭಯ ಇರಲಿ ಎನ್ನುವ ದೃಷ್ಟಿಯಿಂದ ಇಂಪ್ರಿಜನ್‌ಮೆಂಟ್‌ನ್ನೂ ಇದರಲ್ಲಿ ಅವಕಾಶಮಾಡಿಕೊಟ್ಟಿದ್ದೇವೆ. ಫೈನ್, ಪೆನಾಲ್ಟಿ ಕೊಡುವುದು ಲೆಕ್ಕ ಇಲ್ಲ. ಸ್ವಲ್ಪ ಭಯ ಇರಲಿ ಎನ್ನುವ ದೃಷ್ಟಿಯಿಂದ ಇಂಪ್ರಿಜನ್‌ಮೆಂಟ್ ಶಿಕ್ಷೆಕೊಡುವುದನ್ನು ಇದರಲ್ಲಿ ಸೇರಿಸಿದ್ದೇವೆ. ಅಫೆನ್ಸನನ್ನು ಕಾಂಪೌಂಡ್ ಮಾಡಿದರೂ ಸಹ ಲೈಸನ್ಸ್ ಕ್ಯಾನ್ಸಲ್ ಮಾಡಲಿಕ್ಕೆ ಸಾಧ್ಯ. ಅಂತಹ ಒಂದು ಅಧಿಕಾರವನ್ನು ಇಟ್ಟು ಕೊಂಡಿದ್ದೇವೆ. ಇದರ ಜೊತೆಗೆ ಯುಟಿಲೈಸೇಷನ್ ಆಫ್ ಕೆಪಾಸಿಟಿ ಮತ್ತು ಟ್ಯಾಕ್ಸ್‌ನ್ನೂ ಕೂಡ ನಾವು ನೋಡುತ್ತಾ ಇದ್ದೇವೆ. ಇದರಿಂದ ತೃಪ್ತಿಕರವಾದ ಒಂದು ಪರಿಸ್ಥಿತಿ ಉಂಟಾದರೆ ಆಗ ನ್ಯಾಷನಲೈಸೇಷನ್ ಮಾಡುವ ಅವಶ್ಯಕತೆ ಬರಲಿಕ್ಕಿಲ್ಲ. ಶ್ರೀಮಾನ್ ಲಿಂಗಪ್ಪನವರು ಮಾತನಾಡುವಾಗ, ಏನೇನು ನ್ಯಾಷನಲೈಸೇಶನ್ ಮಾಡಬೇಕು ಎಂದು ನಾನು ಪ್ರಶ್ನೆ ಕೇಳಿದೆ. ಥಿಯೇಟರ್‌ಗಳನ್ನು ನ್ಯಾಷನಲೈಸೇಶನ್ ಮಾಡಿಬಿಡಿ ಎಂದು ಹೇಳುವಷ್ಟು ಧೈರ್ಯ ಅವರಿಗೆ ಬಹಿರಂಗವಾಗಿ ಇರಲಿಕ್ಕಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಅಂತರಂಗವಾಗಿ, ಬಹಿರಂಗವಾಗಿ ಹೇಳುತ್ತೇನೆ, ಮಾಡ ಬೇಕು.

ಶ್ರೀ ಎಂ. ವೈ. ಘೋರ್ಪಡೆ.—ಮಾನ್ಯ ಕೃಷ್ಣನ್ ಅವರ ಅಭಿಪ್ರಾಯವೂ ಕೂಡ ನ್ಯಾಷನಲೈ ಸೇಷನ್ ಮಾಡಬೇಕು ಎನ್ನುವುದು ಇದೆ. ಈ ರೀತಿ ಅವರವರ ಅಭಿಪ್ರಾಯ ಇದೆ. ನನ್ನ ಅಭಿಪ್ರಾಯ ಏನೆಂದರೆ, ನನಗೆ ಇದರ ಬಗ್ಗೆ ಕಟ್ಟುನಿಟ್ಟಾದ ಯಾವ ಒಂದು ವಿಚಾರವೂ ಇಲ್ಲ. It depend upon the circumstances. It is not a rigid policy. ನ್ಯಾಷನ ಲೈಸೇಷನ್ ಮಾಡಿದ ತಕ್ಷಣ ಈ ಪರಿಸ್ಥಿತಿಯಲ್ಲಿ ಸಾಕಷ್ಟು ಸುಧಾರಣೆ ಯಾಗುತ್ತದೆ ಎನ್ನುವ ಭರವಸೆ ಕೂಡ ಕೆಲವರಿಗೆ ಇರಲಿಕ್ಕಿಲ್ಲ. ಬಸ್ ನ್ಯಾಷನಲೈಸೇಷನ್ ಬಗ್ಗೆ ಹೆಚ್ಚಿಗೆ ಪ್ರಸ್ತಾಪ ಮಾಡಬೇಕಾದುದಿಲ್ಲ. ಒಟ್ಟಿನಲ್ಲಿ ಹೇಳುವುದಾದರೆ ಟ್ಯಾಕ್ಸ್ ಇವೇಷನ್‌ನ್ನು ಸಂಪೂರ್ಣವಾಗಿ ತಪ್ಪಿಸುವುದರಲ್ಲಿ ಅಧಿಕಾರಸ್ಥರು ಅಷ್ಟೇ ಅಲ್ಲ, ಎಲ್ಲರ ಸಹಕಾರ ಕೂಡ ನಮಗೆ ಬಹಳ ಅತ್ಯಗತ್ಯ.

ಶ್ರೀ ಎಚ್. ಟಿ. ಕೃಷ್ಣಪ್ಪ.—ಮಾನ್ಯ ಸಚಿವರಿಂದ ನಾನು ಒಂದು ಸ್ಪಷ್ಟೀಕರಣವನ್ನು ಪಡೆಯುವುದಕ್ಕೆ ಅಪೇಕ್ಷೆ ಪಡುತ್ತೇನೆ. ದಂಡದ ಜೊತೆಗೆ ಜೈಲುವಾಸವನ್ನೂ ಸಹ ಅನುಭವಿಸಬೇಕು ಎಂದು ಮಾಡಿದ್ದೀರಿ. ದಂಡದ ಜೊತೆಗೆ ಅಂಡ್ ಎಂದು ಸೇರಿಸಿದರೆ It may act as a deterrent ಎಂದು ನನ್ನ ಭಾವನೆ.

ಶ್ರೀ ಎಂ. ವೈ ಘೋರ್ಪಡೆ.—ಅಂಡ್' ಅಂತ ಇರುವುದನ್ನು 'ಆರ್' ಎಂದು ಮಾಡಿದ್ದೇವೆ. ಸಧ್ಯಕ್ಕೆ ಇಷ್ಟು ಮಾಡಿದ್ದೇವೆ. ಇದಕ್ಕಿಂತ ಇಂಪ್ರಿಸನ್‌ಮೆಂಟ್ ಕೊಟ್ಟು, ಪ್ರಿಸನ್‌ಗೆ ಎಲ್ಲರನ್ನೂ ಕಳುಹಿಸುವಂಥ ಹವ್ಯಾಸ ಸರ್ಕಾರಕ್ಕೆ ಇಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಲಕ್ಷಾಂತರ ರೂಪಾಯಿಗಳ ಕಳ್ಳತನ ಮಾಡುವವರು ಇದ್ದಾರೆ.

ಶ್ರೀ ಎಂ. ವೈ. ಘೋರ್ಪಡೆ.—ಇದಕ್ಕಿಂತ ಕಠೋರವಾದದ್ದು ಎಂದರೆ ಲೈಸೆನ್ಸ್ ಅನ್ನು ಕ್ಯಾನ್ಸಲ್ ಮಾಡುವುದು. ಯಾರು ತೆರಿಗೆಯನ್ನು ಕಟ್ಟುವುದಿಲ್ಲವೋ ಅಂಥವರ ಲೈಸೆನ್ಸ್ ಅನ್ನು ಕ್ಯಾನ್ಸಲ್ ಮಾಡುವುದಕ್ಕೆ ನಾವು ಪ್ರಯತ್ನ ಮಾಡಿದ್ದೇವೆ. ಲೈಸೆನ್ಸ್ ಕ್ಯಾನ್ಸಲ್ ಮಾಡಿಬಿಟ್ಟರೆ ಸರಿಯಾದಂಥ ಒಂದು ಮನೋಭಾವ ಬರಲಿಕ್ಕೆ ಸಾಧ್ಯ ಎಂದು ಹೇಳಿ ಅಂಡ್ ಇದ್ದುದನ್ನು ಆರ್ ಎಂದು ಮಾಡಿದ್ದೇವೆ.

ಆಮೇಲೆ ಸರ್ಚಾರ್ಜ್ ಅನೇಕ ತರಹ ಇದೆ. ಬೇಸಿಕ್ ಎಂಟರ್‌ಟೇನ್‌ಮೆಂಟ್ ಟ್ಯಾಕ್ಸ್ ಇದೆ ಬೇಸಿಕ್ ಎಂಟರ್‌ಟೇನ್‌ಮೆಂಟ್ ಟ್ಯಾಕ್ಸ್ 90 ಪರ್ಸೆಂಟ್ ಆಯಾ ಮುನಿಸಿಪಾಲಿಟಿಗಳಿಗೆ ಹೋಗುತ್ತದೆ. ಅನಂತರ ಸರ್ಚಾರ್ಜ್ ಮುನಿಸಿಪಾಲಿಟಿಗಳಿಗೆ ಹೋಗುವುದಿಲ್ಲ ಅದು ಸರ್ಕಾರಕ್ಕೆ ಬರುತ್ತದೆ. ಆಡಿಷನಲ್ ಟ್ಯಾಕ್ಸ್ ಕೂಡ ಸರ್ಕಾರಕ್ಕೆ ಬರುತ್ತದೆ ಮಾನ್ಯ ಕೃಷ್ಣನ್ ಅವರು ಮತ್ತು ಮಾನ್ಯ ಸದಸ್ಯರು ಅನೇಕರು ಹೇಳಿದ ಪ್ರಕಾರ ಎಂಟರ್‌ಟೇನ್‌ಮೆಂಟ್ ಟ್ಯಾಕ್ಸನ್ನು ಹಳ್ಳಿಯ ಮಟ್ಟದಲ್ಲಿ ಸ್ವಲ್ಪ ಬದಲಾವಣೆ ಮಾಡಬೇಕಾಗುತ್ತದೆ. ನಾವು ಒಳ್ಳೆಯ ಪಿಕ್ಚರ್ಸ್ ಅನ್ನು ತಯಾರು ಮಾಡುವ ಅವಕಾಶವನ್ನು ಮಾಡಿಕೊಡುವ ದೃಷ್ಟಿಯಿಂದ ಸರ್ಕಾರ ಹಿಂದೆ ಯಾವ ಕಾಲದಲ್ಲಿಯೂ ಇಷ್ಟೊಂದು ಸಹಾಯ ಮಾಡಿರಲಿಲ್ಲ ಅಷ್ಟು ಸಹಾಯ ಮಾಡುವ ವಿಚಾರವನ್ನು ಇಟ್ಟುಕೊಂಡಿದ್ದೆ'. ಆದರೆ ಅದರ ಪ್ರಕಾರ ನಾವು ಕೆಲವು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಇದರಿಂದ ಬರತಕ್ಕ ಆದಾಯ ಏನು ಇದೆ, ಅದು ಸಾಕಷ್ಟು ಪ್ರಮಾಣದಲ್ಲಿ ಬಂದರೆ ಈ ಉದ್ಯಮದ ಬೆಳವಣಿಗೆಗೋಸ್ಕರ ಉಪಯೋಗವಾಗುತ್ತದೆ. ಪ್ರಗತಿಪರವಾದ ಸಿನಿಮಾಗಳನ್ನು ತಯಾರು ಮಾಡುವುದು, ಮತ್ತು ಈ ಸಿನಿಮಾ ಉದ್ಯಮ ಏನು ಇದೆ ಅದು ಬೆಂಗಳೂರು ಮಟ್ಟದಲ್ಲಿಯೇ ಉಳಿದಿದೆ. ಹಳ್ಳಿಯ ಮಟ್ಟದಲ್ಲಿಯು ಸ್ವಲ್ಪ ಇದು ಬೇಕು ಎನ್ನುವ ದೃಷ್ಟಿಯಿಂದ ನಾವು ಅದಕ್ಕೆ ತಕ್ಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ ಹೀಗೆ ಮಾಡುವಾಗ ಸಿನಿಮಾ ಏನು ಇದೆ, ಅದಕ್ಕೆ ಪ್ರೋತ್ಸಾಹ ಕೊಡಬೇಕು, ಕೊಡದೆ ಡಿಸ್ಕರೇಜ್ ಮಾಡಬೇಕು ಎನ್ನುವುದನ್ನು ಯಾರೂ ಒಪ್ಪಲಿಕ್ಕೆ ಸಾಧ್ಯವಿಲ್ಲ. ಈ ದಿಸೆಯಲ್ಲಿ ಕನ್ನಡ ಚಲನಚಿತ್ರ ಉದ್ಯಮ ಚೆನ್ನಾಗಿ ಬೆಳೆಯಬೇಕು ಎನ್ನುವ ದೃಷ್ಟಿಯಿಂದ ಸಬ್ಸಿಡಿಯನ್ನು ಸಾಕಷ್ಟು ಕೊಟ್ಟು ಕನ್ನಡ ಸಿನಿಮಾಗಳನ್ನು ತಯಾರು ಮಾಡಲಿ ಎಂದು ಹೇಳುತ್ತಿದ್ದೇವೆ. ಇಲ್ಲಿ ಕ್ವಾಲಿಟಿಯ ಪ್ರಶ್ನೆ ಬರುತ್ತದೆ. ಕ್ವಾಲಿಟಿ ಚೆಕ್ ಅನ್ನು ನಾವು ಇನ್ನೂ ಹಾಕಿಲ್ಲ. ಪ್ರೊಡಕ್ಷನ್ ಬಂದನಂತರ, ಬಿಲೋ ಸ್ಟಾಂಡರ್ಡ್ಸ್ ಪಿಕ್ಚರ್ಸ್ ತಯಾರು ಮಾಡುತ್ತಾರೆಯೇ ಇಲ್ಲವೇ ಎನ್ನುವುದನ್ನು ಕಂಡುಹಿಡಿದು ನಂತರ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ; ಆದರೆ ಒಳ್ಳೆಯ ಸಿನಿಮಾ ಏನು ಇದೆ ಅದನ್ನು ಎಲ್ಲರೂ ನೋಡಲಿಕ್ಕೆ ಅವಕಾಶ ಬೇಕು ಎನ್ನುವದೃಷ್ಟಿಯಿಂದ ಇದಕ್ಕೆ ಟ್ಯಾಕ್ಸ್ ಎಕ್ಸಂಪ್ಷನ್ ಕೊಡುವ ಒಂದು ಅಧಿಕಾರ ಸರ್ಕಾರಕ್ಕೆ ಇದೆ. ಆದಷ್ಟು ಒಳ್ಳೆಯ ಸಿನಿಮಾಗಳಿಗೆ ಟ್ಯಾಕ್ಸ್ ಎಕ್ಸಂಪ್ಷನ್ ಕೊಡುತ್ತೇವೆ. ಜೋಮನದುಡಿಗೆ ನಾವು ಟ್ಯಾಕ್ಸ್ ಎಕ್ಸಂಪ್ಷನ್ ಕೊಡದೆ ಹೋಗಿದ್ದರೆ ಇದು ಬಹಳ ದಿವಸ ನಡೆಯುತ್ತಾ ಇರಲಿಲ್ಲ. ನಮ್ಮ ದೇಶದ ಸಮಾಜಿಕ ಪರಿಸ್ಥಿತಿ ಸುಧಾರಿಸಬೇಕಾದರೆ ಒಳ್ಳೆಯ ಪಿಕ್ಚರ್ಸ್ ಅನ್ನು ಎಲ್ಲರೂ ನೋಡಬೇಕಾಗುತ್ತದೆ. ಕೆಲವು ವೇಳೆ ಒಳ್ಳೆಯ ಪಿಕ್ಚರ್ಸ್ ಪ್ರೊಡ್ಯೂಸ್ ಆಗಿದ್ದರೂ ಕೂಡ ಕಮರ್ಷಿಯಲ್ ಆಗಿ ಸಕ್ಸಸ್ ಆಗಿಲ್ಲ. ಆದಕಾರಣ, ಡೈರೆಕ್ಷನ್ ಚೆನ್ನಾಗಿದ್ದು, ಕಮರ್ಷಿಯಲ್ ಆಗಿ ಸಕ್ಸಸ್‌ಫುಲ್ ಆಗಿ ನಡೆಯಲಿಲ್ಲ ಎಂದರೆ ನಾವು ಆಗ ಟ್ಯಾಕ್ಸ್ ಎಕ್ಸಂಪ್ಷನ್ ಕೊಡಬಹುದು. ಈ ದಿಸೆಯಲ್ಲಿ ನಾವು ಆದಷ್ಟು ಮಟ್ಟಿಗೆ ಪ್ರೋತ್ಸಾಹ

ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಕಮರ್ಷಿಯಲ್ ಆಗಿ ಸಕ್ಸಸ್‌ಫುಲ್ ಆಗಿದ್ದರೂ ಕೂಡ ಟ್ಯಾಕ್ಸ್ ಎಕ್ಸೆಂಪ್‌ಷನ್ ಕೊಡಿ ಎಂದು ಕೇಳುವವರು ಜಾಸ್ತಿ ಜನ ಇದ್ದಾರೆ. ಡೈರೆಕ್ಟ ಮಾಡಿರತಕ್ಕವರ ಅಭಿಪ್ರಾಯದಲ್ಲಿ ಡೈರೆಕ್ಷನ್ ಚನ್ನಾಗಿರಬಹುದು, ಇನ್ನೂ ಕೆಲವರ ಅಭಿಪ್ರಾಯ ದಲ್ಲಿ ಈ ಒಂದು ಪಿಕ್ಚರ್ ಯಾವ ಒಂದು ಮೆರಿಟ್ ಕೂಡ ಇರುವುದಿಲ್ಲ. ಇಂಥಾದ್ದಕ್ಕೆ ಟ್ಯಾಕ್ಸ ಎಕ್ಸೆಂಷನ್ ಕೊಡಿ ಎಂದು ಕೇಳುತ್ತಾರೆ We can give tax exemption to pictures which are not commercially successful.

ಶ್ರೀ ಕೋಣಂದೂರು ಲಿಂಗಪ್ಪ.—ನಮ್ಮ ವಿಮರ್ಶಕರ ವಿಚಾರದಲ್ಲಿ ಇಂಟರ್‌ನ್ಯಾಷನಲ್ ಫಿಲಂಸ್ ಚೆನ್ನಾಗಿರುತ್ತವೆ, ಅವರ ದೃಷ್ಟಿಯಲ್ಲಿ ನಮ್ಮ ಫಿಲಂಸ್ ಚೆನ್ನಾಗಿರುತ್ತವೆ. ಇಂಥ ಕೆಲವು ವಿಪರ್ಯಾಸ ಇರುತ್ತವೆ ಇದರ ಬಗ್ಗೆ ಯೋಚನೆ ಮಾಡಿ.

SRI M. Y. GHORPADE.—We are trying to be scrupulous about giving tax exemption. By and large it may be that one or two pictures which do not deserve tax exemption must have been given and one or two pictures which really deserve tax exemption has been given only to pictures which have social theme and above average so far as production, direction and other aspects are concerned. But still some such pictures are not commercially successful. ಮಾನ್ಯ ಕೃಷ್ಣನ್ ಅವರು ಸದನದಲ್ಲಿಲ್ಲ, ಅವರು ಎಲ್ಲಾ ಪಾಯಿಂಟ್ಸ್‌ಗಳಿಗೆ ಉತ್ತರ ಕೊಡುವುದು ಅವಶ್ಯಕ ಇಲ್ಲ. ರಷ್ಯಾದ ಬಗ್ಗೆ ಅವರು ಹೇಳಿದರು, ಅದು ಕಮ್ಯುನಿಷ್ಟ ರಾಷ್ಟ್ರವಾದರೂ ಅಲ್ಲಿ ಟಿಕೆಟ್ ಇಲ್ಲದೆ ಸಿನಿಮಾ ನೋಡಲಿಕ್ಕೆ ಬಿಡುವುದಿಲ್ಲ. ಟಿಕೆಟ್ ಬೆಲೆ ಎಷ್ಟು ಇದೆಯೋ ಅಷ್ಟನ್ನು ಕೊಡಬೇಕಾಗುತ್ತದೆ. ಇದರ ಬಗ್ಗ ಚರ್ಚೆ ಮಾಡಲಿಕ್ಕೂ ಅಲ್ಲಿ ಅವಕಾಶ ವಿಲ್ಲ. ನಮ್ಮ ದೇಶದಲ್ಲಿ ಪಾರ್ಲಿಮೆಂಟರಿ ಡೆಮಾಕ್ರಸಿ ಇರುವುದರಿಂದ ಟ್ಯಾಕ್ಸ್ ಬಗ್ಗೆ ಇದನ್ನೆಲ್ಲಾ ನಾವು ಚರ್ಚೆ ಮಾಡಲಿಕ್ಕೆ ಅವಕಾಶ ಇದೆ.

ಇನ್ನು ಸೆನ್ಸಾರ್ ಬಗ್ಗೆ—ಸೆನ್ಸಾರ್‌ಷಿಪ್ ಟೈಟನ್ ಮಾಡಲಿಕ್ಕೆ ಅದು ರಾಜ್ಯಮಟ್ಟದಲ್ಲಿ ಸಾಧ್ಯವಿಲ್ಲ. ಕೇಂದ್ರದವರು ಇದನ್ನು ನೋಡಿಕೊಳ್ಳುತ್ತಿದ್ದಾರೆ. ರಾಜ್ಯ ಮಟ್ಟದಲ್ಲಿ ಏಕೆ ಮಾಡಬಾರದು ಎನ್ನುವುದರ ಬಗ್ಗೆ ಮಾನ್ಯ ಸದಸ್ಯರು ಯೋಚನೆ ಮಾಡಬೇಕಾಗುತ್ತದೆ. ಸಮಾಜಕ್ಕೆ ಎಲ್ಲಾ ದೃಷ್ಟಿಯಿಂದ ವಿರುದ್ಧವಾಗಿರತಕ್ಕ ಸಿನಿಮಾಗಳು ಬೇಕಾದಷ್ಟು ಕಮರ್ಷಿಯಲ್ ಆಗಿ ಸಕ್ಸೆಸ್ ಆಗಿವೆ, ಇದರಿಂದ ಜನರು ಹಣವನ್ನು ಹಾಳುಮಾಡಿಕೊಳ್ಳುವುದಲ್ಲದೆ ತಮ್ಮ ನೀತಿಯನ್ನು ಹಾಳುಮಾಡಿಕೊಳ್ಳುತ್ತಿದ್ದಾರೆ. ಸಮಾಜಕ್ಕೆ ಯಾವುದು ಒಳ್ಳೆಯದು ಎಂದೂ ಹೇಳುವುದೂ ಕಷ್ಟ. ಈ ದಿಸೆಯಲ್ಲಿ ಸೆನ್ಸಾರ್‌ಷಿಪ್ ಕೇಂದ್ರದ ಹತೋಟಿಯಲ್ಲಿರುವುದರಿಂದ ಇದರ ಬಗ್ಗೆ ಏನೂ ಮಾಡಲಿಕ್ಕೆ ಸಾಧ್ಯವಿಲ್ಲ. ಮಾನ್ಯ ಸದಸ್ಯರಾದ ಲಿಂಗಪ್ಪನವರು ಬಹಳ ಜವಾಬ್ದಾರಿಯಿಂದ ಭಾಷಣ ಮಾಡಿದ್ದಾರೆ. ಇವುಗಳನ್ನು ನ್ಯಾಷನಲೈಸ್ ಮಾಡಿದರೆ ನಮ್ಮದು ಏನೂ ಆಕ್ಷೇಪಣೆಯಿಲ್ಲ ಎಂದು ಹೇಳಿದ್ದಾರೆ. ಇದನ್ನು ನಾನು ಬರೆದುಕೊಂಡಿದ್ದೇನೆ.

ಇನ್ನು ಯಕ್ಷಗಾನ, ಡ್ರಾಮಾ ಇವುಗಳ ಮೇಲೆ ನಾವು ಟ್ಯಾಕ್ಸನ್ನು ಹಾಕಿಲ್ಲ. ಮಾನ್ಯ ಸದಸ್ಯರಾದ ಶ್ರೀಮಾನ್ ವೀರಭದ್ರಪ್ಪನವರೂ ಕೆಲವು ಸಲಹೆಗಳನ್ನು ಮಾಡಿದ್ದಾರೆ. ಪರ್ಸೆಂಟೇಜ್ ವಿಷಯದಲ್ಲಿ ಟೂರಿಂಗ್ ಟಾಕೀಸ್ ಮೇಲಿರುವ ರಿಸ್ಟ್ರಿಕನ್ಸ್‌ನ್ನು ಸ್ವಲ್ಪ ಕಡಿಮೆ ಮಾಡಬೇಕೆಂದು ಹೇಳಿದ್ದಾರೆ. ಇದಕ್ಕೆ ನಾನು ಒಟ್ಟಿನಲ್ಲಿ ಇಷ್ಟು ಮಾತ್ರ ಹೇಳುತ್ತೇನೆ. ಇವತ್ತು ವಿಶೇಷವಾಗಿ ಕನ್ನಡ ಚಲನಚಿತ್ರಗಳ ಉದ್ಯಮನ್ನು ಬೆಳಸಬೇಕಾಗಿದೆ. ಹೀಗೆ ಈ ಚಿತ್ರೋದ್ಯಮವನ್ನು ಬೆಳೆಸುವಾಗ ಅದರಿಂದ ಜನತೆಯ ಮೇಲೆ ಒಳ್ಳೆಯ ಪರಿಣಾಮವುಂಟಾಗುವಂತಹ ರೀತಿಯಲ್ಲಿ ಒಳ್ಳೆಯ ಚಿತ್ರಗಳು ತಯಾರಾಗಬೇಕೆಂಬ ಗುರಿಯನ್ನು ಇಟ್ಟುಕೊಂಡಿದೆ. ಇದು ಒಳ್ಳೆಯ ಗುರಿ. ಆದರೆ ಇಂಥ ಗುರಿಯನ್ನು ಮುಟ್ಟುವಾಗ ಕೆಲವಾರು ತೊಂದರೆಗಳು ಬರುತ್ತವೆ. ಈ ಕನ್ನಡ ಭೂಮಿಯಲ್ಲಿ ಒಳ್ಳೆಯ ಒಳ್ಳೆಯ ಚಲನಚಿತ್ರೋದ್ಯಮವನ್ನು ಬೆಳೆಸುವಂತಹ ಕಾಲ ಬಂದಿದೆ, ಇನ್ನು

ಕೆಲವೇ ದಿವಸಗಳಲ್ಲಿ ಇದು ಒಂದು ಅತ್ಯುತ್ತಮವಾದ ಒಂದು ಮಟ್ಟಕ್ಕೆ ಬರಲಿ ಎಂದು ಹಾರೈಸಿ, ಇವತ್ತು ಏನು ಈ ಒಂದು ಮಸೂದೆಯನ್ನು ಸಭೆಯ ಮುಂದೆ ಮಂಡಿಸಿದ್ದೇವೆ ಇದನ್ನು ಒಪ್ಪಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

MR. DEPUTY SPEAKER.—The question is:

"That the Karnataka Entertainment Tax (Amendment) Bill, 1976 be taken into consideration."

The Motion was adopted

CLAUSE 2

MR. DEPUTY SPEAKER.—The question is:

"That Clause 2 do stand part of the Bill"

The Motion was adopted

Clause 2 was added to the Bill.

CLAUSE 3

MR DEPUTY SPEAKER —There are notices of amendments from Hon'ble Member Sri M. S. Krishnan, and Sri T. R. Shamanna. Hon'ble Member Sri T. R. Shamanna may move his amendment. Sri Krishna is not here.

SRI T. R. SHAMANNA.—I beg to move the following amendment to Clause 3:

"That after Clause '3B' the following proviso shall be added —

'Provided that the Government shall pay to the local bodies Municipality and Corporation in the town or city where the entertainment tax is collected, fifty per cent of the additional tax as collected above, in order to enable the local bodies to keep the surrounding areas clean and to provide better facilities to those citizens who pay the entertainment tax.'"

MR. DEPUTY SPEAKER.—Amendment moved:

"That after new Clause '3B' the following shall be added.–

"Provided that the Government shall pay to the local bodies, Municipality and Corporation in the town or city where the entertainment tax is collected, fifty percent of the additional tax as collected above, in order to enable the local bodies to keep the surrounding areas clean and to provide better facilities to those citizens who pay the entertainment tax."

† ಶ್ರೀ ಟಿ. ಆರ್. ಶಾಮಣ್ಣ.—ಮಾನ್ಯ ಸಭಾಧ್ಯಕ್ಷರೆ, ಈಗ ಏನು ಈ ಮನರಂಜನಾ ತೆರಿಗೆಯನ್ನು ಹಾಕದೆ, ಇದನ್ನು ಮೊದಲು ಸರ್ಕಾರದವರೇ ವಸೂಲು ಮಾಡಿ ಅದರಲ್ಲಿ ೧೦ ಪರ್ಸೆಂಟ್ ಹಣವನ್ನು ಉಳಿಸಿಕೊಂಡು ಉಳಿದ ೯೦ ಪರ್ಸೆಂಟ್ ಹಣವನ್ನು ಸ್ಥಳೀಯ ಸಂಸ್ಥೆಗಳಿಗೆ ಅಂದರೆ ಕಾರ್ಪೊರೇಷನ್‌ಗಳಿಗೆ ಕೊಡುತ್ತಿತ್ತು. ಆಮೇಲೆ ಸರ್ಕಾರ ಹೊಸದಾಗಿ ಸರ್‌ಛಾರ್ಜ್ ಎಂದು ಹಾಕಿ ಹೆಚ್ಚಿನ ಹಣವನ್ನು ಸಂಪಾದನೆ ಮಾಡುತ್ತಿದೆ. ಬೆಂಗಳೂರು ಮುಂತಾದ ದೊಡ್ಡ ದೊಡ್ಡ ನಗರಗಳಲ್ಲಿ ಸಿನಿಮಾಗಳು ಮತ್ತು ರೇಸುಗಳು ಹೆಚ್ಚಿನ ರೀತಿಯಲ್ಲಿ ಇರುವುದರಿಂದ ನಾನಾ ರೀತಿಯ ತೊಂದರೆಗಳು ಆಗುತ್ತಿವೆ. ಈ ಹಿಂದೆ ನಾನು ಬಿಲ್ ಮೇಲೆ ಮಾತನಾಡುವಾಗ ಮನರಂಜನೆಯ ಬಗ್ಗೆ ಯಾವ ವಿರೋಧವನ್ನೂ ವ್ಯಕ್ತಪಡಿಸಿರಲಿಲ್ಲ. ಆಗ ಜನತೆಯ ಆರ್ಥಿಕ ಪರಿಸ್ಥಿತಿ ಮತ್ತು ಜನಗಳಿಗೆ ಆಗುತ್ತಿದ್ದ ಅನಾನುಕೂಲತೆಗಳ ಬಗ್ಗೆ ಮಾತ್ರ ಮಾತನಾಡಿದ್ದ ಅಷ್ಟೆ. ಇವತ್ತಿನ ದಿವಸ ಸಿನಿಮಾ ಮತ್ತು ರೇಸುಗಳಿಂದ ಅನೇಕ ಸಂಸಾರಗಳು ಹಾಳಾಗಿವೆ. ಇವತ್ತು ಈ ಮಹಾ ನಗರದಲ್ಲಿ ನಾಗರೀಕರಿಗೆ ಬೇಕಾಗಿರತಕ್ಕಂಥ ರಸ್ತೆ ಸೌಕರ್ಯ, ದೀಪದ ಸೌಕರ್ಯ, ಇನ್ನೂ ಇತ್ಯಾದಿ ಸೌಕರ್ಯಗಳನ್ನು ಒದಗಿಸುವ ಜವಾಬ್ದಾರಿ ನಗರ ಸಭೆಯ ಮೇಲಿರುವುದರಿಂದ ಈಗ ಏನು ಈ ಟ್ಯಾಕ್ಸ್‌ನಲ್ಲಿ ೯೦ ಪರ್ಸೆಂಟ್ ಕೊಡುತ್ತಾ ಇದೆ ಇದಕ್ಕೆ ಬದಲು ಹೆಚ್ಚುವರಿ ತೆರಿಗೆಯಲ್ಲಿ ೫೦ ಪರ್ಸೆಂಟ್ ಆದರೂ ಈ ಸ್ಥಳೀಯ ಸಂಸ್ಥೆಗಳಿಗೆ ಕೊಟ್ಟರೆ, ಅದರಿಂದ ಸ್ಥಳೀಯ ಸಂಸ್ಥೆಗಳು ನಗರದ ನಾಗರೀಕರಿಗೆ ಬೇಕಾದಂಥ ಸೌಲಭ್ಯಗಳನ್ನು ಒದಗಿಸಿಕೊಡುವುದಕ್ಕೆ ಅನುಕೂಲವಾಗುತ್ತದೆಂದು ಒತ್ತಾಯ ಪೂರ್ವಕವಾಗಿ ಹೇಳಿ ಈ ತಿದ್ದುಪಡಿಯನ್ನು ಒಪ್ಪಿಕೊಳ್ಳಬೇಕೆಂದು ಹೇಳುತ್ತೇನೆ.

† SRI M. Y. GHORPADE.—I have already replied to this point while replying to the debate on the pattern of entertainment tax 90% of the entertainment tax does go to the Municipalities of course it is the surcharge in the entertainment tax which does not. I have already said how the Government has got certain programmes to encourage the movie industry, particularly the Kannada stage and money has to be spent and therefore, at least in this case, the Hon. Member Sri T. R. Shamanna cannot accuse the Government of taking the whole of tax because a portion of it is going to the Municipality and in view of the commitments and responsibilities of the Government, I don't agree that there is a case to give greater share to the Municipalities than what we are giving now and hence, it is wise for us to keep to the pattern to which the Government and the Municipalities are quite well-accustomed and no advantage is there in disturbing that pattern of sharing the tax.

MR. DEPUTY SPEAKER.—The question is:

"That after new Caluse '3B' the following proviso shall be added.—

"Provided that the Government shall pay to the local bodies, Municipality and Corporation in the town or city where the entertainment tax is collected, fifty percent of the additional tax as collected above, in order to enable the local bodies to keep the surrounding areas clean and to provide better facilities to those citizens who pay the entertainment tax."

The Amendment was negatived

MR. DEPUTY SPEAKER.—The question is:

"That Clause 3 do stand part of the Bill."

The Motion was adopted

Clause 3 was added to the Bill.

CLAUSE 4

MR. DEPUTY SPEAKER.—There is a notice of Amendment from the Hon'ble Minister for Finance. He may move the amendment.

SRI. M. Y. GHORPADE.—Sir, I beg to move the following amendment to Clause 4.

"That after sub-clause (2), the following sub-clause shall be inserted, namely:

"(3) in sub-clause (3), for the words, figures and letter "Section 3, 3A and 4" the words, figures and letters '3, 3A, 3B and 4' shall be substituted."

MR. DEPUTY SPEAKER.—Amendment moved:

"That after sub-clause (2), the following sub-clause shall be inserted, namely:

"(3) in sub-clause (3), for the words, figures and letter 'section 3, 3A and 4', the words, figures and letters 'Section 3, 3A, 3B and 4' shall be substituted."

† SRI M. Y. GHORPADE.—This is a very simple amendment to correct a omission which has taken place by oversight. All that this amendment seeks to do is to add Section 3B which refers to the additional tax that we now proposed to levy, in additional to th entertainment tax, and surcharge leviable under Sections 3 and 3A.

4-30 P.M.

MR. DEPUTY SPEAKER.—I will put the amendment moved by the Minister to the vote of the House,

The question is:

"That after sub-clause (2), the following sub-clause shall be inserted, namely:

"(3) in sub-clause (3), for the words, figures and letters "Section 3, 3A and 4" the words, figures and Letters 'section 3, 3A, 3B and 4' shall be substituted".

The amendment was adopted

MR. DEPUTY SPEAKER.— I shall put the Clause 4 as amended to the vote of the House.

The question is:

"That Clause 4 as amended do stand part of the Bill".

The amendment was adopted

Clause 4, as amendment was added to the Bill

CLAUSE-5

MR: DEPULY SPEAKER.—There are notices of Amendment by Sri T. R. Shamanna and also Government.

SRI T. R. SHAMANNA,—Sir, I move:

"That in Clause 5 for the word 'twice' the word 'thrice' shall be substituted"

MR. DEPUTY SPEAKER,—Amendment moved.

"That in clause 5 for the word 'twice' the word 'thrice' shall be substituted"

SRI M, Y. GHORPADE.—I move:

"That for clause 5, the following clause shall be substituted, namely:

"5, Amendment of Section 6B,—In Section 6B of the principal Act.—

(i) in sub-section (1), after the words, figure and letter "or section 3A" wherever it occurs, the words, figure and letter "or section 3B" shall be inserted;

(ii) in sub-section (2), for the words "one and half times' the word "twice" shall be substitut d"

MR. DEPUTY SPEAKER—Motion moved:

"That for clause 5, the following clause shall be substituted, namely:

"5,, Amendment of Section 6B: In Section 6B of the Principal Act,—

(i) in sub-section (1) after the words, figure and letter "or section 3A wherever it occurs, the words, figure and letter "or section 3B" shall be inserted:

(ii) in sub-section (2), for the words "one and half times the word "twice" shall be substituted".

SRI M. Y. GHORPADE.—So far as this question is concerned 3B refers to this additional taxation. This is to correct the un-intentional mistake or omission.

SRI T. R. SHAMANNA.—Sir, in respect of offence committed severe penalty has to be imposed not only to arrest the evils that are taking place, but also we should see that the penalty should be a deterrent for such mal-parctices. Lenient punishments may not give fruitful results. With that view Government while putting this additional clause stated that instead of one and half the word 'twice' has been inserted. It is not sufficient if they keep 'twice'. In order to stop such malpractices deterrent punishments will have to be given, So, I have proposed 'thrice' instead of 'twice' which may kindly be accepted.

SRI M. Y. GHORPADE.—Sir, I am prepared to make this 'thrice' instead of 'twice'. It may be changed as 'thrice' instead of 'twice'

MR. DEPUTY SPEAKER.—I will put the amendment moved by the Minister to the vote of the House. The question is:

'That for clause 5, the following clause shall be substituted, namely:

5. Amendment of Section 6B: In Section 6B of the principal Act—

(i) in sub-section (1) after the words, figure and letter "or section 3A wherever it occurs, the words, figure and letter "or section 3B" shall be inserted;

(ii) in sub-section (2), for the words ' one and half times' ' the word "thrice" shall be substituted".

The amendment was adopted

MR. DEPUTY SPEAKER.—The question is:

"That Clause 5, as amended, do stand part of the Bill".

The motion was adopted

Clause 5 as amended was added to the Bill.

CLAUSE-6

SRI M. Y. GHORPADE.—Sir, I move:

"That in clause 6 after the proposed sub-section 4 the following explanation shall be inserted *viz.* Explanation: For the purpose of this Section Entertainment tax includes additional taxes also".

MR. DEPUTY SPEAKER.—Motion moved.

"That in clause 6 after the proposed sub-section 4 the following explanation shall be inserted *viz*. Explanation. For the purpose of this Section Entertainment tax included additional taxes also".

SRI M. Y, GHORPADE.—This amendment is also for identical purposes. To make the position more clear I have moved this amendment.

MR. DEPUTY SPEAKER.—I will put the motion to the vote of the House. The question is:

"That in clause 6 after the proposed sub-section 4 the following explanation shall be inserted *viz*: Explanation: For the purpose of this section Entertainment tax includes additional taxes also".

The amendment was adopted

MR. DEPUTY SPEAKER.—I shall put clause 6 as amended to the vote of the House, The question is:

"That Clause 6, as amended do stand part of the Bill as amended".

The motion was adopted

Clause 6, as amended, was added to the Bill,

CLAUSE-7

SRI T. R. SHAMANNA.—Sir, I move:

"That in clause 7 of Sub-clause 2 the following sub-clause shall be added-provided if the Govt. under the above section were to repay the proprietor the amount of entertainment tax paid by him in respect of such performance where the show could not be completed on account of failure of electric power, the Karnataka Electricity Board be required to pay the compensation as per the regulation to be framed by the Government in this regard to reimburse the loss sustained by the Government on account of the failure of electricity".

MR. DEPUTY SPEAKER.—Amendment moved:

"That in clause 7 of Sub-clause 2 the following sub-clause shall be added-" provided if the Govt. under the above section were to repay the proprietor the amount of entertainment tax paid by him in respect of such performance where the show could not be completed on account of failure of electric power, the Karnataka Electricity Board be required to pay the compensation as per the regulation to be framed by the Government in this regard to reimburse the loss sustained by the Government on account of the failure of electricity".

† ಶ್ರೀ ಟಿ. ಆರ್. ಶಾಮಣ್ಣ.—ಇದು ಒಂದು ಮಹತ್ವವಾದಂಥ ತಿದ್ದುಪಡಿ ಎಂದು ನಾನು ತಿಳಿದುಕೊಂಡಿದ್ದೇನೆ. ಬಾಂಬೆಯಂಥ ಕೆಲವು ಬೇರೆ ಬೇರೆ ದೇಶಗಳಲ್ಲಿ ಎಲೆಕ್ಟ್ರಿಸಿಟಿ ಫೇಲ್ ಆದರೆ ಅದಕ್ಕೆ ಆಗತಕ್ಕಂಥ ನಷ್ಟವನ್ನು ಎಲೆಕ್ಟ್ರಿಸಿಟಿ ಬೋರ್ಡ್‌ನವರೇ ಕಟ್ಟಿಕೊಡತಕ್ಕಂಥ ಒಂದು ಕಡ್ಡಾಯವಾದ ಕಾಯಿದೆ ಇರುತ್ತದೆ. ನಮ್ಮ ರಾಜ್ಯದಲ್ಲಿ ಮದುವೆ ಮುಂತಾದ ಮುಖ್ಯವಾದ ಇತರೆ ಕಾರ್ಯಗಳು ನಡೆಯುವಾಗ ಎಲೆಕ್ಟ್ರಿಸಿಟಿ ಫೇಲ್ ಆಗುವುದು, ಹುಡುಗರು ಓದುತ್ತಿರುವಾಗ ಎಲೆಕ್ಟ್ರಿಸಿಟಿ ನಿಂತುಹೋಗುವುದು, ಈ ರೀತಿಯಾಗಿ ಎಲೆಕ್ಟ್ರಿಸಿಟಿಯಮೇಲೆ ಯಾವ ವಿಧವಾದ ಕಂಟ್ರೋಲ್ ಇಲ್ಲದೆ ಇರತಕ್ಕಂಥದ್ದು ಇರುತ್ತದೆ. ಅಲ್ಲದೆ ಕೆಲವು ಸಂದರ್ಭಗಳಲ್ಲಿ ಮಳೆಗಾಲದಲ್ಲಿಯೂ, ಬೇಸಿಗೆಕಾಲದಲ್ಲಿಯೂ ಇದ್ದಕ್ಕಿದ್ದಹಾಗೆ ಎಲೆಕ್ಟ್ರಿಸಿಟಿ ನಿಂತುಹೋಗುವುದು ಒಂದು ರೀತಿಯಾದ ಆಶ್ಚರ್ಯವನ್ನುಂಟು ಮಾಡುವ ವಿಷಯವಾಗಿರುತ್ತದೆ. ಎಲೆಕ್ಟ್ರಿಸಿಟಿಯನ್ನು ಮೊದಲು ಉತ್ಪಾದನೆ ಮಾಡಿದಂಥ ನಮ್ಮ ರಾಜ್ಯದಲ್ಲಿ ದಿವಂಗತ ಶೇಷಾದ್ರಿ ಐಯರ್‌ರವರ ಕಾಲದಲ್ಲಿ ಬಹಳ ಉತ್ತಮವಾಗಿ ಮತ್ತು ಯಶಸ್ವಿಯಾಗಿ ನಡೆಯುತ್ತಾ ಇದ್ದಂಥ ಒಂದು ವ್ಯವಸ್ಥೆ ಇತ್ತು. ಈಗ ಎಲೆಕ್ಟ್ರಿಸಿಟಿ ಬೋರ್ಡ್ ಆದಮೇಲೆ ಆಗುತ್ತಿರುವ ಅವ್ಯವಸ್ಥೆ ಅನೇಕವಾಗಿ ಸಾರ್ವಜನಿಕರಿಗೆ ಗೊತ್ತಿರುತ್ತದೆ. ಉದಾಹರಣೆಗೆ ಹೇಳುವುದಾದರೆ ಹಣವನ್ನು ಖರ್ಚುಮಾಡಿ ಸಿನಿಮಾವನ್ನು ನೋಡಿ ಸಂತೋಷಪಡಬೇಕೆಂದು ಬರತಕ್ಕಂಥವರಿಗೆ ಇದ್ದಕ್ಕಿದ್ದಹಾಗೆ ಎಲೆಕ್ಟ್ರಿಸಿಟಿ ಫೇಲ್ಯೂರ್ ಆಗಿ ಸಿನಿಮಾ ನಿಂತುಹೋದರೆ ಅವರಿಗೆ ಎಷ್ಟು ಬೇಜಾರಾಗುತ್ತದೆ ಎನ್ನುವ ಅಂಶವನ್ನು ಮುಖ್ಯವಾಗಿ ಗಮನಿಸಬೇಕಾದ ವಿಚಾರವಾಗಿರುತ್ತದೆ. ಕೆಲವು ಸಂದರ್ಭಗಳಲ್ಲಿ ಅನುಕೂಲವಿರತಕ್ಕಂಥವರು ಪ್ರತ್ಯೇಕವಾಗಿ ಜನರೇಟರ್‌ಗಳನ್ನು ಇಟ್ಟುಕೊಂಡು ಸಿನಿಮಾಗಳನ್ನು ನಡೆಸುತ್ತಾ ಇರುತ್ತಾರೆ. ಅನುಕೂಲವಿಲ್ಲದ ಅನೇಕ ಸಿನಿಮಾ ಮಾಲಿಕರು ಜನರೇಟರ್‌ಗಳನ್ನು ಇಟ್ಟುಕೊಳ್ಳದೆ ನೇರವಾಗಿ ಎಲೆಕ್ಟ್ರಿಸಿಟಿಯಿಂದಲೇ ನಡೆಸುತ್ತಿರುತ್ತಾರೆ. ಇಂಥವರಿಗೆ ಬೇರೆ ರೀತಿಯಲ್ಲಿ ಸಬ್‌ಸ್ಟಿಟ್ಯೂಟ್ ಮಾಡದೆ, ಪವರ್ ಕೊಡದೆ ಇರತಕ್ಕಂಥ ಕಾರಣದಿಂದ ಬಹಳವಾಗಿ ದೂರುಗಳು ಬರುತ್ತಾ ಇದೆ. ಸಿನಿಮಾವನ್ನು ನೋಡಲು ಬಂದ ಜನರಿಗೆ ಮಧ್ಯದಲ್ಲಿ ಎಲೆಕ್ಟ್ರಿಸಿಟಿ ತೊಂದರೆಯಿಂದ ನಿಂತು ಹೋದ ಪಕ್ಷದಲ್ಲಿ ಸಿನಿಮಾ ಮಾಲೀಕರು ಹಣವನ್ನು ವಾಪಸ್‌ಕೊಡಬೇಕೆನ್ನುವ ಒಂದು ನಿಬಂಧನೆ ಇರುತ್ತದೆ.

ಎಲೆಕ್ಟ್ರಿಸಿಟಿ ಫೈಲ್ಯೂರ್ ಆದರೆ ಸಿನಿಮಾ ಮಾಲೀಕರು ಆ ಹಣವನ್ನು ವಾಪಸ್ಸು ಕೊಡಬೇಕು ಎನ್ನುವ ಒಂದು ನಿಬಂಧನೆ ಈ ಒಂದು ನಿಯಮಾವಳಿಯಲ್ಲಿ ಬಂದಿದೆ. ಎಲೆಕ್ಟ್ರಿಸಿಟಿ ಬೋರ್ಡಿನವರ ಒಂದು ಅದಕ್ಷತೆಯಿಂದ ಎಲೆಕ್ಟ್ರಿಸಿಟಿ ಫೈಲ್ಯೂರ್ ಆಗಿ ಸಿನಿಮಾ ನಿಂತುಹೋದರೆ ಆ ಹಣವನ್ನು ಸರ್ಕಾರದವರಿಗೆ ವಾಪಸ್ಸು ಕಟ್ಟಿಕೊಡಬೇಕು ಎಂದು ಹೇಳುವುದರ ಬಗ್ಗೆ ನನಗೆ ಇದು ಅರ್ಥವಾಗದೇ ಇರುವ ವಿಚಾರ. ಸಾಮಾನ್ಯವಾಗಿ ಹುಡುಗರು ಪರೀಕ್ಷೆ ಕಾಲದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾಗ ಎಲೆಕ್ಟ್ರಿಸಿಟಿ ನಿಂತು ಹೋಗಿ ಅವರು ಎಷ್ಟರಮಟ್ಟಿಗೆ ಕಷ್ಟಪಡುತ್ತಾ ಇದ್ದರು ಎನ್ನುವುದು ನನಗೆ ಅನುಭವಕ್ಕೆ ಬಂದಿದೆ. ಅದೇರೀತಿಯಾಗಿ ಈ ಮನರಂಜನೆಯಲ್ಲೂ ಕೂಡ ಎಲೆಕ್ಟ್ರಿಸಿಟಿ ಫೈಲ್ಯೂರ್ ಆದರೆ ಆ ಹಣವನ್ನು ರೀಇಂಬರ್ಸ್ ಮಾಡಬೇಕು ಎಂದರೆ ಇದು ಯಾವ ನ್ಯಾಯ ? ಇದರಲ್ಲಿ ಯಾರು ತಪ್ಪಿತಸ್ಥರು ಇದ್ದಾರೋ ಅವರಿಗೆ ಶಿಕ್ಷೆ ಕೊಡಬೇಕು. ಸರ್ಕಾರದವರಿಗೆ ಇದನ್ನು ರೀಇಂಬರ್ಸ್ ಮಾಡಿದ ಮೇಲೆ ಎಲೆಕ್ಟ್ರಿಸಿಟಿ ಬೋರ್ಡ್‌ನವರು ಇದನ್ನು ಮತ್ತೆ ವಾಪಸ್ಸು ಮಾಡುತ್ತಾರೆಯೇ ? ಆದುದರಿಂದ ನನ್ನ ಉದ್ದೇಶವಾದರೂ ಇಷ್ಟೆ ಇದರಲ್ಲಿ ಯಾರು ತಪ್ಪಿತಸ್ಥರು ಇದ್ದಾರೋ ಅವರಿಗೆ ಶಿಕ್ಷೆ ಕೊಟ್ಟು ಅವರಿಂದ ಈ ಹಣವನ್ನು ವಸೂಲ್ಮಾಡಬೇಕು ಎಂದು ಹೇಳುತ್ತೇನೆ. ಆದುದರಿಂದ ತಾವು ಈ ಅಮೆಂಡ್‌ಮೆಂಟನ್ನು ಒಪ್ಪಿಕೊಳ್ಳಬೇಕು ಎಂದು ಕೇಳಿಕೊಳ್ಳುತ್ತೇನೆ.

† SRI M Y. GHORPADE.—Sir, while the intention of the hon'ble. member is understandable that the Electricity Board should not get away scotfree even when inconvenience is caused to citizens by power breakdown, but I wish to submit that the Entertainment Tax Act cannot be amended or that is not the method of correcting that situation. After all by the amendment of section 8, the idea here is that if as a result of power breakdown, the

proprietor was forced to refund the amount to the patrons, then it is not fair for the Government to charge entertainment tax on that. Now by amending this section, the object we have in mind cannot be served because the legal position is that the Electricity Board is set up under the Indian Electricity Supply Act of 1948 and it is this Act which regulates the relationship between the Board and the consumers. Therefore it is not legal or feasible for a State Government to demand payment of compensation by the Board through the Entertainment tax. This is not the place to do it. I would suggest that the hon'ble. member may take up this matter separately and see in what way his object can be achieved but certainly not in the legal framework that we are functioning. It would not be possible legally to achieve that object by an amendment moved to this Bill.

SRI T. R. SHAMANNA.—Since the Hon'ble. Minister has understood the spirit of my amendment, I withdraw my amendment.

MR DEPUTY SPEAKER.—Is it the pleasure of the House to withdraw the amendment ?

Hon'ble Member : Yes

The amendment was by leave of the House withdrawn

MR. DEPUTY SPEAKER.—The question is :

"That clause 7 do stand part of the Bill.'

The motion was adopted

Clause 7 was added to the Bill.

CLAUSES 8 to 13

MR. DEPUTY SPEAKER.—Since there are no amendments to clauses 8 to 13, I shall put these clauses to the vote of the House.

The question is :

"That clauses 8 to 13th both inclusive do stand part of the Bill."

The motion was adopted

Clauses 8 to 13 both inclusive were added to the Bill.

CLAUSES 1 ETC

MR: DEPUTY SPEAKER —The question is :

"That clause 1, long title, the Preamble and the enacting formula do stand part of the Bill."

The motion was adopted

Clause 1, the long title the preamble and the enacting formula were added to the Bill.

Motion to pass

SRI M. Y. GHORPADE (Minister for Finance & Housing).—I beg to move—

"That the Karnataka Entertainment Tax (Amendment) Bill, 1976 as amended be passed."

MR. DEPUTY SPEAKER —The question is :

"That the Karnataka Entertainment Tax (Amendment) Bill, 1976 as amended be passed."

The motion was adopted and the Bill as amended was passed.

THE KARNATAKA SALES TAX (Third Amendment) Bill, 1976.

Motion to Consider

SRI M. Y. GHORPADE (Minister for Finance and Housing).–I move:

"That the Karnataka Sales Tax (Third Amendment) Bill, 1976 be taken into consideration."

MR. DEPUTY SPEAKER.—Motion moved.

"That the Karnataka Sales Tax (Third Amendment) Bill, 1976 be taken into consideration."

† SRI M. Y. GHORPADE —Sir, this Sales Tax Amendment Bill is brought in pursuance of the changes that I had suggested at the time of the Budget. It might be recalled that on certain items of the sales tax, amendments had been suggested with a view to get about Rs. 2 crores To recollect the position briefly, it has been suggested that the purchase tax on sugarcane payable by the Khandsari Units be raised from 9 per ton to Rs. 16 per ton. This is estimated to get an additional income of Rs. 28 lakhs. The Sales tax on tea is being increased from 6 to 8 per cent. This will fetch an additional income of Rs. 32 lakhs. All electrical goods except I.P. sets upto 10 H P., this tax is increased from 8 to 10 per cent and this will fetch Rs 68 lakhs. Heavy chemicals (such as Sulphuric acid, Hydro-chloric acid, caustic Soda. etc, tax being raised from 6 to 8 per cent which will bring in an additional Rs. 11 lakhs. Lubricating oils including grease and furnace oil, tax being increased from 6 to 8 per cent to fetch about Rs. 10 lakhs. Industrial gas, such as oxygen acetylene,